# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

ಸಂ:ತೋಉನಿ/ಜಿಪಂ/ಚಿಪುರ/ಕೇಕಸ: :2016-17 ದಿನಾಂಕ:

## ಸಾರ್ವಜನಿಕ ಮಾಹಿತಿಗೆ ಪ್ರಕಟಣೆ

## 2016-17

### ಮಾಹಿತಿ ಹಕ್ಕು ಅಧಿನಿಯಮ, 2005ಪ್ರಕರಣ 4 (1) (b) ಅಡಿಯಲ್ಲಿ ಮಾಹಿತಿ ಪ್ರಕಟಣೆ

### 1) ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಚಿಕ್ಕಬಳ್ಳಾಪುರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು.

### ಸಾಮಾನ್ಯ ಮಾಹಿತಿ

ಕನ್ನಡನಾಡು ಚಿನ್ನದ ಬೀಡು ಎಂಬ ನಾಣ್ಣುಡಿಗೆ ಮೂಲ ಕಾರಣವಾದ ಕೋಲಾರ ಜಿಲ್ಲೆಯಿಂದ ಬೇರ್ಪಟ್ಟು ಚಿಕ್ಕಬಳ್ಳಾಪುರ ಜಿಲ್ಲೆಯಾಗಿ ದಿನಾಂಕ:23.08.2007 ರಿಂದ ಆರು ತಾಲ್ಲೂಕುಗಳನೊಳಗೊಂಡ ಚಿಕ್ಕಬಳ್ಳಾಪುರ ಜಿಲ್ಲೆಯು ಕಾರ್ಯರೂಪ ಮಾಡಿರುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯು ಕರ್ನಾಟಕದ ರಾಜ್ಯದ ದಕ್ಷಿಣ ದಿಕ್ಕಿನಲ್ಲಿದೆ. ಚಿಕ್ಕಬಳ್ಳಾಪುರ ಜಿಲ್ಲೆಯು 4254 ಚ.ಕಿ.ಮೀ ಪ್ರದೇಶವನ್ನು ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪಿಸಿರುತ್ತದೆ. ಜಿಲ್ಲೆ 13° 26´ ಉ. ಅಕ್ಷಾಂಶ ದಿಂದ 13° 43´ ಉ. ಅಕ್ಷಾಂಶ ಮತ್ತು 77° 43´ ಪೂ. ರೇಖಾಂಶದಿಂದ 77° 72´ ಪೂ. ರೇಖಾಂಶದಡಿಯಲ್ಲಿ ಸ್ಥಿತವಾಗಿರುವ ಜಿಲ್ಲೆ ಸಮುದ್ರ ಮಟ್ಟದಿಂದ 911.665 ಮೀ ಎತ್ತರ ಪ್ರದೇಶದಲ್ಲಿ ಇರುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆ 1514 ಹಳ್ಳಿಗಳನ್ನು ಹೊಂದಿದ್ದು 151 ಗ್ರಾಮ ಪಂಚಾಯಿತಿಗಳನ್ನು ಹೊಂದಿರುತ್ತದೆ. ಜಿಲ್ಲೆ 26 ಹೋಬಳಿಗಳನ್ನು ಹೊಂದಿದ್ದು 6 ತಾಲೂಕುಗಳಾಗಿ ವಿಂಗಡಿಸಲ್ಪಟ್ಟಿದೆ. 2001 ರ ಜನಗಣತಿಯ ಪ್ರಕಾರ 11,49,007 ಜನಸಂಖ್ಯೆಯನ್ನು ಹೊಂದಿದ್ದು 9,27,985 ಜನರು (81%) ಗ್ರಾಮೀಣ ಪ್ರದೇಶದಲ್ಲೇ ವಾಸಿಸುತ್ತಾರೆ. ಭೌಗೋಳಿಕವಾಗಿ ಜಿಲ್ಲೆ 4,04,501 ಹೆ. ಭೂಪ್ರದೇಶವನ್ನು ಹೊಂದಿದ್ದು, ಅದರಲ್ಲಿ49,704 ಹೆ. ಪ್ರದೇಶ ಅರಣ್ಯದಿಂದ ಕೂಡಿದೆ. ಒಟ್ಟು 1,74,222 ಹೆ. ಬಿತ್ತನೆ ಪ್ರದೇಶದಲ್ಲಿ 41540 ಹೆ. ತೋಟಗಾರಿಕೆ ಪ್ರದೇಶ ಜಿಲ್ಲೆಯಲ್ಲಿರುತ್ತದೆ. ಜಿಲ್ಲೆಯಲ್ಲಿ 2,03,847 ಕೃಷಿ ಕುಟುಂಬಗಳು ವಾಸಿಸುತ್ತಿದ್ದು 1,73,757 ಕುಟುಂಬಗಳು ಸಣ್ಣ ಮತ್ತು ಅತಿ ಸಣ್ಣ ಕುಟುಂಬಗಳಾಗಿರುತ್ತವೆ. ಜಿಲ್ಲೆಯ ಜನರ ಮುಖ್ಯ ಕಸಬು ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಹೈನೋದ್ಯಮವಾಗಿರುತ್ತದೆ.



# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

ಚಿಕ್ಕಬಳ್ಳಾಪುರ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ದಿಕ್ಕಿನಲ್ಲಿದೆ. ಈ ಜಿಲ್ಲೆಯನ್ನು ಪೂರ್ವ ಕೃಷಿ ವಲಯವೆಂದು ವಿಂಗಡಿಸಲಾಗಿದೆ. ಜಿಲ್ಲೆಯ ಪೂರ್ವಕ್ಕೆ ಕೋಲಾರ ಜಿಲ್ಲೆ ಪಶ್ಚಿಮಕ್ಕೆ ತುಮಕೂರು ಜಿಲ್ಲೆ, ಉತ್ತರ ಪ್ರದೇಶಕ್ಕೆ ಕರ್ನಾಟಕ ರಾಜ್ಯದ ಗಡಿ ಭಾಗಗಳನ್ನು ಹಾಗೂ ದಕ್ಷಿಣಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಂದಿದೆ. ಈ ಜಿಲ್ಲೆಯು ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ ಮತ್ತು ಶಿಡ್ಲಘಟ್ಟ ತಾಲೂಕುಗಳನ್ನೊಳಗೊಂಡಿರುತ್ತದೆ. ಜಿಲ್ಲೆಯ ಗಡಿಯು ಭೌಗೋಳಿಕವಾಗಿ ಯಾವುದೇ ನದಿ ಅಥವಾ ಪರ್ವತಗಳಿಂದ ಬೇರ್ಪಟ್ಟಿರುವುದಿಲ್ಲ. ಜಿಲ್ಲೆಯ ಮಧ್ಯೆ ಮತ್ತು ಪೂರ್ವಭಾಗವು ಕಣಿವೆಮಾರ್ಗದಿಂದ ಕೂಡಿದ್ದು, ಇಲ್ಲಿ ಜಿಲ್ಲೆಯ ಉತ್ತರ ಗಡಿಯು ಕಣಿವೆ ಪ್ರದೇಶವಾಗಿದ್ದು, ಆಂದ್ರಪ್ರದೇಶದ ಅನಂತಪುರದವರೆಗೂ ಹೆಚ್ಚು ಸಮತಟ್ಟಾದ ಪ್ರದೇಶವಾಗಿದೆ. ಜಿಲ್ಲೆಯು ಅನೇಕ ಬೆಟ್ಟಗಳಿಂದ ಅವೃತವಾಗಿದ್ದು, ಈ ಬೆಟ್ಟಗಳು ದೊಡ್ಡ ಗ್ರಾನೈಟ್ ಕಲ್ಲುಗಳಿಂದ ಕೂಡಿದೆ. ಈ ಬಂಡೆಗಳು ಭಾರೀ ನಿರ್ಮಾಣಕ್ಕೆ ಬೇಕಾಗುವ ಕಲ್ಲು ಮತ್ತು ಚಪ್ಪಡಿಗಳ ಮುಖ್ಯ ಮೂಲವಾಗಿದೆ.ಈ ಜಿಲ್ಲೆಯು ಸಮುದ್ರ ಮಟ್ಟದಿಂದ 911.665 ಮೀ ಎತ್ತರ ಪ್ರದೇಶದಲ್ಲಿರುತ್ತದೆ. ಈ ಪ್ರದೇಶವು ಸರಾಸರಿ 773 ಮೀ.ಮೀ ಮಳೆಯನ್ನು ವಾರ್ಷಿಕವಾಗಿ ಪಡೆಯುತ್ತದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೆಚ್ಚಾಗಿ ಮರಳು ಮಿಶ್ರಿತ ಕೆಂಪು ಮಣ್ಣು ಅವರಿಸಿದ್ದೂ, ಸಮತೋಲನವಾದ ಹವಾಗುಣವಿದ್ದು, ಒಣಹವೆಯಿಂದ ಕೂಡಿರುತ್ತದೆ. ಇಡೀ ವರ್ಷದ ಹವಾಗುಣಕ್ಕೆ ಅನುಗುಣವಾಗಿ ನಾಲ್ಕು ಋತು ಮಾನಗಳಾಗಿ ವಿಂಗಡಿಸಬಹುದು. ಜನವರಿ ರಿಂದ ಫೆಬ್ರವರಿ ತನಕ ಒಣಹವೆ (25-30 ˚C ) ಇರುತ್ತದೆ. ಮಾರ್ಚ್‌ನಿಂದ ಮೇ ವರೆಗೆ (28-30 ˚C) ಬಿಸಿ ಹವೆ, ಜೂನ್ ನಿಂದ ಸೆಪ್ಟೆಂಬರ್‌ವರೆಗೆ (25-30 ˚C)ನೈರುತ್ಯ ಮಾರುತ ಹಾಗೂ ಅಕ್ಟೋಬರ್ ರಿಂದ ಡಿಸೆಂಬರ್ ವರೆಗೆ (23-30 ˚C) ಈಶಾನ್ಯ ಮಾರುತ ಕಾಲವಾಗಿರುತ್ತದೆ. ಸಾಮಾನ್ಯವಾಗಿ ಜಿಲ್ಲೆಯ ಮಣ್ಣು ಆಮ್ಲೀಯ ರಸಸಾರವನ್ನು ಹೊಂದಿದೆ. ಸಾವಯವ ಇಂಗಾಲ ಮಣ್ಣಿನಲ್ಲಿ ಸಾಕಷ್ಟು ಇದ್ದರೆ, ಪೊಟ್ಯಾಶ್ ಮತ್ತು ರಂಜಕ ಅಂಶ ಮಧ್ಯಮ. ಜಿಲ್ಲೆಯ ಮಣ್ಣು ಜಿಂಕ್ ಮತ್ತು ಬೋರಾನ್ ಕೊರತೆಯನ್ನು ಹೊಂದಿದೆ.

ಜಿಲ್ಲೆಯಲ್ಲಿ ವರ್ಷವಿಡೀ ತುಂಬಿಹರಿಯುವ ನದಿಗಳಿರುವುದಿಲ್ಲ, ಆದರೆ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ದಕ್ಷಿಣ ಪಿನಾಕಿನಿ ನದಿಯು ಮಳೆಗಾಲದಲ್ಲಿ ಹಾಗೂ ಚಿಂತಾಮಣಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಪಾಪಾಗ್ನಿ ನದಿಯು ಹರಿಯುತ್ತದೆ.

**<u>ಜಿಲ್ಲೆಯ ವಿಶೇಷ ತೋಟಗಾರಿಕಾ ಬೆಳೆಗಳು</u>**

| ಬೆಳೆ | ತಳಿ |
|---|---|
| ದ್ರಾಕ್ಷಿ | ಬೆಂಗಳೂರು ನೀಲಿ, ದಿಲ್‌ಕುಷ್, ಅನಾಬಿ ಷಾಹಿ, ಶರತ್ ಸೀಡ್‌ಲೇಸ್ |
| ಆಲೂಗಡ್ಡೆ | ಕುಫ್ರಿಜ್ಯೋತಿ |
| ಟಮೋಟೋ | ಅಭಿನವ್, 618, ಅರ್ಕಾ ರಕ್ಷಕ್, ಅರ್ಕಾ ಸಾಮ್ರಾಟ್ |
| ಮಾವು | ಬಾದಾಮಿ, ಬೆಂಗಳೂರ, ನೀಲಂ, ಮಲ್ಲಿಕಾ, ಬೇನೀಷಾ |
| ಬಾಳೆ | ಜಿ-9, ಏಲಕ್ಕಿ |
| ಗುಲಾಬಿ ಈರುಳ್ಳಿ | Local Var, ಅಗ್ರಿ ಫೌಂಡ್ ರೋಸ್. |
| ಕ್ಯಾರೆಟ್ | ಟೊಕಿಟೋ |
| ಗುಲಾಬಿ | ಚೆರಿಷ್ಮಾ, ರೂಬಿ ರೆಡ್, ಫೈವ್ ಸ್ಟಾರ್, ಅಂಬರ್ ಸ್ಟಾರ್, ರೂಬಿಸ್ಟಾರ್ |
| ಗ್ಲಾಡಿಯೋಲಸ್ | ಪ್ರೇಂಡ್‌ಷಿಪ್ ವೈಟ್, ಅಮೇರಿಕನ್ ಬ್ಯೂಟಿ, ಸನ್‌ಸೆಟ್ ಎಲ್ಲೋ, ಅಸ್ಕರ್. |
| ಸುಗಂದರಾಜ | Local Var (Single), ಅರ್ಕಾ ಪ್ರಜ್ವಲ್ |
| ಮೆಣಸಿನಕಾಯಿ | ಗೌರಿಬಿದನೂರು, ಡೆಮಾನ್, ಚಿಕ್ಕಬಳ್ಳಾಪುರ ಲೋಕಲ್ |
| ಕನಕಂಬರಾ | Local Var, ಅರ್ಕಾ ಅಂಬರ, ಅರ್ಕಾ ಸೌಂದರ್ಯ. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**2. ಉಪ ನಿರ್ದೇಶಕರ ಕಛೇರಿಯ ವ್ಯಾಪ್ತಿಗೆ ಬರುವ ಕಛೇರಿಗಳು:**

| ಕ್ರ.ಸಂ. | ಕಛೇರಿಯ ಹೆಸರು | ತಾಲ್ಲೂಕು. |
|---|---|---|
| 1. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಬಾಗೇಪಲ್ಲಿ | ಬಾಗೇಪಲ್ಲಿ |
| 3. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಂತಾಮಣಿ | ಚಿಂತಾಮಣಿ |
| 4. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ) ಗೌರಿಬಿದನೂರು | ಗೌರಿಬಿದನೂರು |
| 5. | ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಗುಡಿಬಂಡೆ | ಗುಡಿಬಂಡೆ |
| 6. | ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಶಿಡ್ಲಘಟ್ಟ | ಶಿಡ್ಲಘಟ್ಟ |
| 7. | ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಚಿಕ್ಕಬಳ್ಳಾಪುರ | |

**3. ಜಿಲ್ಲೆಯಲ್ಲಿರುವ ತೋಟಗಾರಿಕೆ ಬೆಳೆಗಳ ಮಾಹಿತಿ:**

2016-17 ನೇ ಸಾಲಿಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 41540 ಹೆ ತೋಟಗಾರಿಕಾ ಪ್ರದೇಶ ಇರುತ್ತದೆ. ಇದ್ದು ಶೇ.20.49% ರಷ್ಟು ಪ್ರದೇಶವನ್ನು ತೋಟಗಾರಿಕಾ ಬೆಳೆ ಆಕ್ರಮಿಸಿಕೊಂಡಿರುತ್ತದೆ. ವಿವಿಧ ತೊಟಗಾರಿಕಾ ಬೆಳೆಗಳ ಅಡಿ ಇರುವ ಪ್ರದೇಶಗಳ ವಿವರ ಈ ಕೆಳಗಿನಂತಿರುತ್ತದೆ.

ಕಳೆದ ಸಾಲಿಗೆ ತೋಟಗಾರಿಕಾ ಬೆಳೆಗಳ ಉತ್ಪನ ಸುಮಾರು 643643 ಮೆಟ್ರಿಕ ಟನಗಳೆಂದು ಅಂದಾಜಿಸಲಾಗಿದ್ದು, ಉತ್ಪಾದಕತೆ 76 ಟನ ಪ್ರತಿ ಹೆಕ್ಟರಿಗೆ ಅಂದಾಜಿಸಲಾಗಿದೆ. ತೋಟಗಾರಿಕಾ ಬೆಳೆಗಳ ಮೌಲ್ಯ ರೂ. 115886 ಲಕ್ಷಗಳೆಂದು ಅಂದಾಜಿಸಲಾಗಿರುತ್ತದೆ.

| ಕ್ರ.ಸಂ | ಬೆಳೆಗಳು | ವಿಸ್ತೀರ್ಣ (ಹೆ) | ಉತ್ಪನ(ಟನ್) | ಇಳುವರಿ(ಟನ್/ಹೆ.) | ಮೌಲ್ಯ (ರೂ.ಲಕ್ಷ) |
|---|---|---|---|---|---|
| 1. | ಹಣ್ಣಿನ ಬೆಳೆಗಳು | 21110 | 281504 | 2120 | 54231 |
| 2. | ತರಕಾರಿ ಬೆಳೆಗಳು | 13542 | 333316 | 121 | 40084 |
| 3. | ಸಾಂಬಾರು ಬೆಳೆಗಳು | 1139 | 4599 | 51 | 3232 |
| 4. | ತೋಟದ ಬೆಳೆಗಳು | 3435 | 3830 | 12 | 4757 |
| 5. | ವಾಣಿಜ್ಯ ಬೆಳೆಗಳು | 2154 | 14883 | 84 | 10281 |
| 6. | ಸುಗಂಧಿತ ಬೆಳೆಗಳು | 60 | 600 | 30 | 72 |
| 7. | ಪಾಲಿಹೌಸ್ ಬೆಳೆಗಳು | 99.64 | 4910 | 1373 | 3229 |
| | **ಒಟ್ಟು** | 41540 | 643643 | **3790** | **115886** |

**ತಾಲೂಕುವಾರು ತೋಟಗಾರಿಕೆ ಬೆಳೆಗಳ ಮಾಹಿತಿ**

| ಕ್ರ.ಸಂ | ತಾಲ್ಲೂಕು | ವಿಸ್ತೀರ್ಣ (ಹೆ) | ಉತ್ಪನ(ಟನ್) | ಇಳುವರಿ(ಟನ್/ಹೆ.) | ಮೌಲ್ಯ (ರೂ.ಲಕ್ಷ) |
|---|---|---|---|---|---|
| 1. | ಚಿಕ್ಕಬಳ್ಳಾಪುರ | 10143 | 172955 | 557 | 38273 |
| 2. | ಚಿಂತಾಮಣಿ | 11469 | 142261 | 752 | 23598 |
| 3. | ಗೌರಿಬಿದನೂರು | 6272 | 107506 | 809 | 24038 |
| 4. | ಶಿಡ್ಲಘಟ್ಟ | 8212 | 112546 | 604 | 13391 |
| 5. | ಬಾಗೇಪಲ್ಲಿ | 4220 | 85250 | 560 | 12817 |
| 6. | ಗುಡಿಬಂಡೆ | 1224 | 23126 | 507 | 3769 |
| | **ಒಟ್ಟು** | 41540 | 643643 | 3790 | 115886 |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**4. ಜಿಲ್ಲೆಯಲ್ಲಿರುವ ತೋಟಗಾರಿಕಾ ಕ್ಷೇತ್ರ/ಸಸ್ಯಗಾರಗಳ ಮಾಹಿತಿ:**

| ಕ್ರ. ಸಂ | ತೋಟಗಾರಿಕೆ ಕ್ಷೇತ್ರ/ ಸಸ್ಯಗಾರಗಳ ಹೆಸರು ಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಎಕರೆ) | ಅಭಿವೃದ್ಧಿಪಡಿಸಿದ ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸಬೇಕಾಗಿರುವ ವಿಸ್ತೀರ್ಣ (ಎಕರೆ) | ಮೂಲಭೂತ ಸೌಕರ್ಯ ಮತ್ತು ಸಸ್ಯ ಸಂಪತ್ತಿನ ವಿವರ |
|---|---|---|---|---|---|
| 1. | ಚಿನ್ನೆಪಲ್ಲಿ ತೋಟಗಾರಿಕೆ ಕ್ಷೇತ್ರ ಬಾಗೇಪಲ್ಲಿ ತಾ// | 40.00 | 10.00 | - | ತೆಂಗು-143, ಮಾವು-87, ಸಪೋಟ-24, ಸೀಬೆ-26, ಕೊಳವೆಭಾವಿ-2, ತಂತಿಬೇಲಿ. |
| 2. | ಬಾಗೇಪಲ್ಲಿ ತಾಲ್ಲೂಕು ನರ್ಸರಿ | 0.20 | 0.20 | - | ತೆಂಗು-01, ಸಪೋಟ-11, ಗೋಡಂಬಿ-1, ಕೊಳವೆಬಾವಿ-1, ಐ.ಪಿ.ಸೆಟ್-1, ತಂತಿಬೇಲಿ. |
| 3. | ಮುದ್ದೇನಹಳ್ಳಿ ಅಲಂಕಾರಿಕ ಕ್ಷೇತ್ರ ಚಿಕ್ಕಬಳ್ಳಾಪುರ ತಾಲ್ಲೂಕು | 5.34 | 6.12 | | ಅಲಂಕಾರಿಕ ಗಿಡಗಳು ಮಾವು-13, ತೆಂಗು-10, ಕೊಳವೆಬಾವಿ-2, ತಂತಿಬೇಲಿ, ಕಛೇರಿ ಕಟ್ಟಡ. |
| 4. | ಪೆರಮಾಚನಹಳ್ಳಿ ತೋಟಗಾರಿಕೆ ಕ್ಷೇತ್ರ, ಚಿಂತಾಮಣಿ ತಾಲ್ಲೂಕು | 4.03 | 4.03 | | ಮಾವು-63, ಗೋಡಂಬಿ-44, ತಂತಿ ಬೇಲಿ |
| 5. | ಸೊಣ್ಣಶೆಟ್ಟಹಳ್ಳಿ ತೋಟಗಾರಿಕೆ ಕ್ಷೇತ್ರ, ಚಿಂತಾಮಣಿ ತಾಲ್ಲೂಕು | 4.00 | 4.00 | - | ಕಾಂಪೌಂಡ್, ಕೊಳವೆಬಾವಿ, ಕಾವಲುಗಾರನ ಕೊಠಡಿ, ನೀರಿನ ತೊಟ್ಟಿ. |
| 6. | ಕರೇಕಲ್ಲಹಳ್ಳಿ ತೋಟಗಾರಿಕೆ ಕ್ಷೇತ್ರ, ಗೌರಿಬಿದನೂರು ತಾಲ್ಲೂಕು | 39.24 | 35.05 | | ತೆಂಗು-100, ಮಾವು-180, ಸೀಬೆ-90, ಸಪೋಟ-170, ದಾಳಿಂಬೆ-12, ಕೊಳವೆಬಾವಿ-1, ಐ.ಪಿ.ಸೆಟ್-1, ನೀರಿನ ತೊಟ್ಟಿ, ತಂತಿ ಬೇಲಿ. |
| 7. | ತಾಲ್ಲೂಕು ನರ್ಸರಿ, ಗುಡಿಬಂಡೆ | 0.08 | 1.00 | - | ತೆಂಗು-18, ಸಪೋಟ-14, ದಾಳಿಂಬೆ-1, ಕೊಳವೆ, ಐ.ಪಿ.ಸೆಟ್-1, ತಂತಿಬೇಲಿ. |
| 8. | ಗರುಡಾಚಾರ್ಲಹಳ್ಳಿ ತೋಟ-ಗಾರಿಕೆ ಕ್ಷೇತ್ರ, ಗುಡಿಬಂಡೆ ತಾಲ್ಲೂಕು. | 11.38 | 10.50 | | ಗೋಡಂಬಿ-850. |
| 9. | ಚೌಡಸಂದ್ರ ತೋಟಗಾರಿಕೆ ಕ್ಷೇತ್ರ, ಶಿಡ್ಲಘಟ್ಟ ತಾಲ್ಲೂಕು | 10.20 | 10.00 | - | ಮಾವು-12, ಸೀಬೆ-150, ಸಪೋಟ-150, ದಾಳಿಂಬೆ-5, ತೆಂಗು-4, ಹಲಸು-1, ಇತರೆ-43, ಹುಣಸೆ-1, ನಿಂಬೆ-1, ಕಛೇರಿ ಕಟ್ಟಡ, ನೀರಿನ ತೊಟ್ಟಿ-1, ತೆರೆದ ಬಾವಿ-1. |
| 10. | ಪಿ.ಆರ್.ಎಸ್.ತೋಟಗಾರಿಕಾ ಕ್ಷೇತ್ರ, ಚಿಕ್ಕಬಳ್ಳಾಪುರ | 47.28 | 47.00 | | ಮಾವು-399, ಸಪೋಟ-1053, ಸೀಬೆ-363, ತೆಂಗು-134, ಹಲಸು-3, ಕಛೇರಿ ಕಟ್ಟಡ-1, ದಾಸ್ತಾನು ಕೊಠಡಿ, ಶೀತಲಗೃಹದ ಕಟ್ಟಡ-2, ಕೊಳವೆಬಾವಿ-3, ನೀರಿನ ತೊಟ್ಟಿ-2, ಹಸಿರು ಮನೆ-5, ನೆರಳು ಚಪ್ಪರ-5. |
| 11. | ತಾಲ್ಲೂಕು ನರ್ಸರಿ, ಚಿಕ್ಕಬಳ್ಳಾಪುರ | 0.20 | 0.20 | | ಕಛೇರಿ ಕಟ್ಟಡ |
| 12. | ತಾಲ್ಲೂಕು ನರ್ಸರಿ ಚಿಂತಾಮಣಿ | 0.13 | 0.13 | | ತೆಂಗು-5, ಸಪೋಟ-6, ಮಾವು-25, ಕಛೇರಿ ಕಟ್ಟಡ, ತೆರೆದ ಬಾವಿ, ಪಂಪ್‌ಸೆಟ್-1, ಹಸಿರು ಮನೆ-1 |
| 13. | ಮಾಡಿಕೆರೆ ತೋಟಗಾರಿಕೆ ಕ್ಷೇತ್ರ, ಚಿಂತಾಮಣಿ | 10.00 | 10.00 | | ತೆಂಗು-53, ಮಾವು-157, ಸಪೋಟ-58, ಕಛೇರಿ ಕಟ್ಟಡ-1, ಕೊಳವೆಬಾವಿ-2, ನೀರೆತ್ತುವಯಂತ್ರ-2, ನೀರಿನತೊಟ್ಟಿ-1. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

| ಕ್ರ. ಸಖಿ | ತೋಟಗಾರಿಕೆ ಕ್ಷೇತ್ರ/ ಸಸ್ಯಗಾರಗಳ ಹೆಸರು ಮತ್ತು ವಿಳಾಸ | ಖಿಟ್ಟು ವಿಸ್ತೀರ್ಣ (ಎಕರೆ) | ಅಭಿವೃದ್ಧಿಪಡಿಸಿದ ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸ ಬೇಕಾಗಿರುವ ವಿಸ್ತೀರ್ಣ (ಎಕರೆ) | ಮೂಲಭೂತ ಸೌಕರ್ಯ ಮತ್ತು ಸಸ್ಯ ಸಂಪತ್ತಿನ ವಿವರ |
|---|---|---|---|---|---|
| 14. | ಪಸಪಲೋಡು ತೋಟಗಾರಿಕೆ ಕ್ಷೇತ್ರ ಗುಡಿಬಋಡೆ | 30.21 | 28.38 | | ಗೋಡಋಖಿ-1200, ಸಪೋಟ-40, ಮಾವು-50, ಕೊಳವೆಬಾವಿ-2, ಪಋಿಹೌಸ್-1, ನೀರೆತ್ತುವ ಋುಋಿತ್ರ-2, ನೀರಿನತೊಟ್ಟಿ-1. |
| 15. | ಮಿಣಕನಗುರ್ಕಿ ತೋಟಗಾರಿಕೆ ಕ್ಷೇತ್ರ, ಗೌರಿಬಿದನೂರು | 1.20 | 1.20 | | ಮಾವು-30, ತೆಋಿಗು-2, ಕೊಳವೆ ಬಾವಿ-1, ಕಛೇರಿ ಕಟ್ಟಡ-1, ಕಾವಲುಗಾರರ ಕೊಠಡಿ-1, ಜನರೇಟರ್-1, ಹಸಿರುಮನೆ-1, ನೀರೆತ್ತುವ ಋುಋಿತ್ರ-1. |
| 16. | ತಾಲ್ಲೂಕು ನರ್ಸರಿ ಶಿಡ್ಲಘಟ್ಟ | 3.15 | 2.25 | | ಸಪೋಟ-74, ತೆಋಿಗು-41, ಹಲಸು-3, ಕಛೇರಿ ಕಟ್ಟಡ-1, ನೀರಿನ ತೊಟ್ಟಿ-1, ಕೊಳವೆಬಾವಿ-1, ನೀರೆತ್ತುವ ಋುಋಿತ್ರ-1. |
| 17. | ಚಿಕ್ಕದಾಸರಹಳ್ಳಿ ಮಾವು ತೋಟಗಾರಿಕೆ ಕ್ಷೇತ್ರ ಶಿಡ್ಲಘಟ್ಟ | 38.00 | 38.00 | | ಮಾವು-856, ತೆಋಿಗು-123, ಹಲಸು-3, ಹುಣಸೇ-8, ಕಛೇರಿ ಕಟ್ಟಡ-1, ನೀರಿನ ತೊಟ್ಟಿ-2, ಉಗ್ರಾಣ-1, ಕೊಳವೆಬಾವಿ-2, ನೀರೆತ್ತುವ ಋುಋಿತ್ರ-2, ಹಸಿರುಮನೆ-3, ನೆರಳುಚಪ್ಪರ-1. |
| 18. | ಚಿಕ್ಕದಾಸರಹಳ್ಳಿ ಗೋಡಋಖಿ ತೋಟಗಾರಿಕೆ ಕ್ಷೇತ್ರ ಶಿಡ್ಲಘಟ್ಟ | 390 | 300.00 | | ಗೋಡಋಖಿ-22000, ಮಾವು-500, ಕಾವಲುಗಾರನ ಕೊಠಡಿ-1. |
| 19. | ಸೊಪ್ಪಹಳ್ಳಿ ತೋಟಗಾರಿಕೆ ಕ್ಷೇತ್ರ, ಚಿಕ್ಕಬಳ್ಳಾಪುರ ತಾಲ್ಲೂಕು. | 23.05 | 23.05 | | ಮಾವು, ತೆಋಿಗು, ಹುಣಸೆ ಮತ್ತು ನೇರಳೆ. |
| 20. | ಸರ್.ಎಂ.ವಿಶ್ವೇಶ್ವರಯ್ಯ ಮಿನಿ ಬಟಾನಿಕಲ್ ಗಾರ್ಡನ್ | 70.00 | - | | |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**5. ತೋಟಗಾರಿಕಾ ಉಪ ನಿರ್ದೇಶಕರು,ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ಜಿಲ್ಲಾ ಮಟ್ಟದ ಕಛೇರಿಯ ಕಾರ್ಯಸಂಘಟನೆಯ ಪಟ್ಟಿ.**

ತೋಟಗಾರಿಕೆ ಉಪ ನಿರ್ದೇಶಕರ

↓

ಕೇಂದ್ರ ಕಛೇರಿ ಸಹಾಯಕರು (ಸಹಾಯಕ ತೋಟಗಾರಿಕೆ ನಿರ್ದೇಶಕರು)

↓

| | |
|---|---|
| ತಾಂತ್ರಿಕ ಸಹಾಯಕರು(1) | ಅಧೀಕ್ಷಕರು |
| ಸಹಾಯಕ ಸಾಂಖ್ಯಿಕ ಅಧಿಕಾರಿಗಳು(1) | ಪ್ರಥಮ ದರ್ಜೆ ಸಹಾಯಕರು |
| | ದ್ವಿತೀಯ ದರ್ಜೆ ಸಹಾಯಕರು |
| | ಬೆರಳಚ್ಚುಗಾರರು |
| | ವಾಹನ ಚಾಲಕರು |
| | ಅಟೆಂಡರ್ |
| | ಸೇವಕರು |

ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 6 ತಾಲ್ಲೂಕುಗಳಿದ್ದು, ಚಿಕ್ಕಬಳ್ಳಾಪುರ, ಚಿಂತಾಮಣಿ ಹಾಗೂ ಗೌರಿಬಿದನೂರು ತಾಲ್ಲೂಕುಗಳಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಶಿಡ್ಲಘಟ್ಟ, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಿಗೆ ಸಹಾಯಕ ತೋಟಗಾರಿಕೆ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ ಹಾಗೂ ರಾಜ್ಯವಲಯ ವಿಭಾಗಕ್ಕೆ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಚಿಕ್ಕಬಳ್ಳಾಪುರಕ್ಕೆ. ಎಲ್ಲಾ ತಾಲ್ಲೂಕು ಕಛೇರಿಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತವೆ. ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಚಿಕ್ಕಬಳ್ಳಾಪುರ ಅಧೀನ 15 ತೋಟಗಾರಿಕೆ ಕ್ಷೇತ್ರಗಳು ಮತ್ತು 5ಕಛೇರಿ ನರ್ಸರಿಗಳು ಇರುತ್ತದೆ.

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯು ಈ ಮೇಲ್ಕಾಣಿಸಿದ ಎಲ್ಲಾ ಕಛೇರಿಗಳ ಮೇಲು ಉಸ್ತುವಾರಿ ನಡೆಸುತ್ತದೆ. ತೋಟಗಾರಿಕೆ ಉಪ ನಿರ್ದೇಶಕರು ಈ ಎಲ್ಲಾ ಕಛೇರಿಗಳ ಮುಖ್ಯಸ್ಥರಾಗಿದ್ದು, ಒಬ್ಬರು ಕೇಂದ್ರ ಕಛೇರಿ ಸಹಾಯಕರು, ಒಬ್ಬರು ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಒಬ್ಬರು ಸಹಾಯಕ ಸಾಂಖ್ಯಿಕ ಅಧಿಕಾರಿ, ಒಬ್ಬರು ಅಧೀಕ್ಷಕರು, ಒಬ್ಬರು ಪ್ರಥಮ ದರ್ಜೆ ಸಹಾಯಕರು, ಒಬ್ಬರು ದ್ವಿತಿಯ ದರ್ಜೆ ಸಹಾಯಕರು, ಒಬ್ಬರು ಬೆರಳಚ್ಚುಗಾರರು, ಒಬ್ಬರು ವಾಹನ ಚಾಲಕ ಒಬ್ಬರು ಅಟೆಂಡರ್, ಒಬ್ಬರು ಸೇವಕರು ಹಾಗೂ ಒಬ್ಬರು ತೋಟಗಾರ ಹುದ್ದೆಗಳು ಇರುತ್ತದೆ.

**7. ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರುತ್ತದೆ.**

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**ಸಾಮಾನ್ಯ ಕಾರ್ಯಗಳು**

1. ಜಿಲ್ಲೆಯಲ್ಲಿ ಈ ಕಛೇರಿಯು ಕೇಂದ್ರ ಕಛೇರಿಯಾಗಿದ್ದು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು.
2. ಜಿಲ್ಲೆಯ ತೋಟಗಾರಿಕೆ ಬೆಳೆಗಾರರ ಅವಶ್ಯಕತೆಗಳಿಗೆ ತಕ್ಕಂತೆ ಯೋಜನೆಗಳನ್ನು ರೂಪಿಸುವುದು.
3. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಿ ಸಮರ್ಪಕವಾಗಿ ಅನುಷ್ಠಾನಗೊಳಿಸುವುದು.
4. ಅಧೀನ ಕಛೇರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.
5. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಸರ್ವತೋಮುಖ ಅಭಿವೃದ್ಧಿ ಪಡಿಸಲು ಅವಶ್ಯವಿರುವ ಮಾರ್ಗದರ್ಶನ ನೀಡುವುದು.
6. ಯೋಜನೆ/ಯೋಜನೇತರ ಬಿಲ್ಲುಗಳಿಗೆ ಮೇಲು ರುಜು ಮಾಡುವುದು.
7. ಜಿಲ್ಲೆಯ ವಿವಿಧ ತಾಲ್ಲೂಕು ತೋಟಗಾರಿಕೆ ಕಛೇರಿಗಳು ಹಾಗೂ ರಾಜ್ಯ ವಲಯ ಕಛೇರಿಗಳನ್ನು ಪರಿಶೀಲನೆ ನಡೆಸುವುದು.
8. ಜಿಲ್ಲಾ ಮಟ್ಟದಲ್ಲಿ ವಿವಿಧ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ಪರಿಶೀಲನೆ ಮಾಡಿ ಜಿಲ್ಲಾ ಕ್ರೋಡಿಕೃತ ಪ್ರಗತಿ ವರದಿಯನ್ನು ತಯಾರಿಸಿ ರಾಜ್ಯ ಮಟ್ಟಕ್ಕೆ ಸಲ್ಲಿಸುವುದು.
9. ವಿಶೇಷ ಯೋಜನೆಗಳ ಅನುಷ್ಠಾನಕ್ಕೆ ಅವಶ್ಯವಿರುವ ಜಿಲ್ಲಾ ಮಟ್ಟದ ಸಮಿತಿಗಳು ಸದಸ್ಯ ಕಾರ್ಯದರ್ಶಿ/ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದು.
10. ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭಗಳಿಗೆ ಇಲಾಖೆಯ ಪ್ರತಿನಿಧಿಯಾಗಿ ಭಾಗವಹಿಸುವುದು.
11. ಪ್ರಕೃತಿ ವಿಕೋಪ ಸಂಭವಿಸಿದ ಸಮಯದಲ್ಲಿ ಆಗಿರುವ ಹಾನಿಯ ಅಂದಾಜನ್ನು ಪರಿಶೀಲಿಸಿ . ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಸಹಾಯ ಧನಕ್ಕೆ ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡುವುದು.

**ವಿಸ್ತರಣೆ ಮತ್ತು ತರಬೇತಿ**

1. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಕುರಿತು ರೈತರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನಿಡುವುದು.
2. ತೋಟಗಾರಿಕ ಬೆಳೆಗಳ ಬೇಸಾಯ ,ನಿರ್ವಹಣೆ,ಕೊಯ್ಲು,ಸಂಸ್ಕರಣೆ ಕುರಿತು ರೈತರಿಗೆ ತರಬೇತಿ ನೀಡುವುದು.
3. ತೋಟಗಾರಿಕೆಯಲ್ಲಿ ಸಾವಯವ ಕೃಷಿ,ಜೇನು ಕೃಷಿ ಅವಶ್ಯಕ ಹೊಸ ತಂತ್ರಜ್ಞಾನಗಳನ್ನು ರೈತರಿಗೆ ತರಬೇತಿ ವಿಚಾರ ಸಂಕಿರಣ , ಕಾರ್ಯಗಾರ ಮುಖಾದವುಗಳನ್ನು ಏರ್ಪಡಿಸುವ ಮೂಲಕ ಮಾಹಿತಿ ಒದಗಿಸುವುದು.
4. ತೋಟಗಾರಿಕೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಹೊಸ ಹೊಸ ಯೋಜನೆಗಳ ಮಾಹಿತಿಯನ್ನು ಪತ್ರಿಕೆ ಆಕಾಶವಾಣಿ,ದೂರದರ್ಶನ ಮುಂತಾದ ಸಮೂಹ ಮಾದ್ಯಮಗಳ ಮೂಲಕ ರೈತರಿಗೆ ತಲುಪುವಂತೆ ಮಾಡುವುದು.
5. ಕೃಷಿ ವಿಜ್ಞಾನ ಕೇಂದ್ರ,ಕೃಷಿ ವಿಶ್ವವಿದ್ಯಾಲಯ ಮುಂತಾದ ಕೃಷಿ ಆದಾರಿತ ಸಂಶೋಧನ ಕೇಂದ್ರಗಳಿಂದ ವಿವಿಧ ಹೊಸ ತಂತ್ರಜ್ಞಾನಗಳನ್ನು ರೈತರ ತೋಟಗಳಿಗೆ ತಲುಪುವಂತೆ ಮಾಡುವುದು.
6. ರೈತರ ಮಕ್ಕಳಿಗೆ ,ರೈತರಿಗೆ,ರೈತ ಮಹಿಳೆಯರಿಗೆ ತರಬೇತಿ ನೀಡುವುದು.
7. ರೈತರನ್ನು ರಾಜ್ಯ ಮತ್ತು ಹೊರ ರಾಜ್ಯಗಳ ಉತ್ತಮ ತೋಟ ಮತ್ತು ಸಂಶೋಧನ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ರೈತರ ಜ್ಞಾನ ವರ್ಧನೆಗೆ ಸಹಕರಿಸುವುದು.

**ಸಸ್ಯಾಭಿವೃದ್ಧಿ**

1. ಉತ್ತಮ ಗುಣಮಟ್ಟದ ಜಿಲ್ಲೆಯ ವಾತಾವರಣಕ್ಕೆ ಹೊಂದುವ ತಳಿಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸುವುದು.
2. ಇಲಾಖೆಯ ತೋಟಗಾರಿಕೆ ಕ್ಷೇತ್ರ/ನರ್ಸರಿಗಳಿಂದ ಉತ್ತಮ ಗುಣಮಟ್ಟದ ಕಸಿ/ಸಸಿಗಳನ್ನು ಉತ್ಪಾದಿಸಲು ಕ್ರಮಕೈಗೊಳ್ಳವುದು
3. ಜಿಲ್ಲೆಯ ವಿಶೇಷ ತೋಟಗಾರಿಕ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಳ್ಳವುದು.

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**ಪ್ರದೇಶ ವಿಸ್ತರಣೆ.**

1. ಜಿಲ್ಲೆಯ ವಾತಾವರಣಕ್ಕೆ ಸೂಕ್ತವಾದ ತಳಿಗಳನ್ನು ಆಯ್ಕೆಮಾಡಿ ಅವುಗಳ ಪ್ರದೇಶ ವಿಸ್ತರಣೆ ಕೈಗೊಳ್ಳವುದು.
2. ಆಯಾ ಪ್ರದೇಶಗಳಿಗೆ ಸೂಕ್ತವಾದ ಬೆಳೆಗಳನ್ನು ಮತ್ತು ತಳಿಗಳನ್ನು ಆಯ್ಕೆ ಮಾಡಿ ಯೋಗ್ಯ ಫಲಾನುಭವಿಗಳಿಂದ ಪ್ರದೇಶ ವಿಸ್ತರಣೆ ಕೈಗೊಳ್ಳವುದು.
3. ಹಣ್ಣು,ತರಕಾರಿ,ಹೂವಿನ ಬೆಳೆಗಳು, ತೋಟದ ಬೆಳೆಗಳು, ಸಾಂಬಾರು ಬೆಳೆಗಳು, ಔಷದಿ ಬೆಳೆಗಳು, ಸುಗಂಧ ದ್ರವ್ಯ ಬೆಳೆಗಳ ಪ್ರದೇಶ ವಿಸ್ತರಣೆಗೆ ಯೋಗ್ಯವಾದ ಪರಿಸರವನ್ನು ಆಯ್ಕೆಮಾಡಿ ಅಲ್ಲಿನ ರೈತರಿಗೆ ಸದರಿ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರೋತ್ಸಾಹಿಸುವುದು.
4. ಹೊಸ ಬೆಳೆಗಳು ,ತಳಿಗಳನ್ನು ಪರಿಚಯಿಸುವುದು.
5. ವಿನಾಶದ ಅಂಚಿನಲ್ಲಿರುವ ತೋಟಗಾರಿಕ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪಡಿಸುವುದು.

**ನೀರಿನ ಸಂಗ್ರಹಣಾ ಘಟಕಗಳ ನಿರ್ಮಾಣ**

1. ತೋಟಗಾರಿಕಾ ಬೆಳೆಗಳಿಗೆ ಅವಶ್ಯಕತೆಯಿರುವ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಬೇಕಾದ ಸಮುದಾಯ/ಕೃಷಿ ಹೊಂಡಗಳನ್ನು ನಿರ್ಮಿಸಲು ರೈತರನ್ನು ಪ್ರೋತ್ಸಾಹಿಸುವುದು.
2. ವೈಜ್ಞಾನಿಕ ಪದ್ಧತಿ ಯಲ್ಲಿ ಬೆಳೆಗಳಿಗೆ ಸಾಕಾಗುವ ಪ್ರಮಾಣದ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ವೈಯಕ್ತಿಕ ಕೃಷಿ ಹೊಂಡ ನಿರ್ಮಿಸಲು ಸಹಾಯ ಧನ ಒದಗಿಸುವುದು.

**ಸಂರಕ್ಷಿತ ಬೇಸಾಯ**

1. ತೋಟಗಾರಿಕಾ ಬೆಳೆಗಳಿಗೆ ಅವಶ್ಯಕವಿರುವ ಹಸಿರುಮನೆಗಳ ನಿರ್ಮಾಣಕ್ಕೆ ರೈತರನ್ನು ಪ್ರೋತ್ಸಾಹಿಸುವುದು.
2. ಶೇಡ್ ನೆಟ್ ಮನೆಯಲ್ಲಿ ತರಕಾರಿಗಳ ಬೇಸಾಯಕ್ಕೆ ಪ್ರೋತ್ಸಾಹಿಸುವುದು.
3. ಹೊಸ ಹೊಸ ಬೆಳೆಗಳನ್ನು ಸಂರಕ್ಷಿತ ಬೇಸಾಯದಲ್ಲಿ ಬೆಳೆಯಲು ಪ್ರೋತ್ಸಾಹಿಸುವುದು.

**ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಡೆ ನಿರ್ವಹಣೆ**

1. ತೋಟಗಾರಿಕಾ ಬೆಳೆಗಳಿಗೆ ಅವಶ್ಯಕವಿರುವ ಪೋಷಕಾಂಶಗಳ ನಿರ್ವಹಣೆ ಮಾಡಲು ಬೇಕಾದ ಜೈವಿಕ ಗೊಬ್ಬರಗಳ ಉಪಯುಕ್ತತೆ ಬಗ್ಗೆ ಮಾಹಿತಿ ಹಾಗೂ ಮೂಲಗಳ ಬಗ್ಗೆ ಮಾಹಿತಿ ನೀಡುವುದು.
2. ಹಸಿರೆಲೆ ಗೊಬ್ಬರಗಳ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿ ಬಳಕೆಯನ್ನು ಪ್ರೋತ್ಸಾಹಿಸುವುದು.
3. ಜೈವಿಕ ಪದ್ಧತಿಯಲ್ಲಿ ರೋಗ ಮತ್ತು ಕೀಟಗಳ ನಿಯಂತ್ರಣ ಪದ್ಧತಿಗೆ ಪ್ರೋತ್ಸಾಹಿಸುವುದು.
4. ಸಾರ್ವಜನಿಕ ವಲಯದಲ್ಲಿ ರೋಗ ಮುನ್ಸೂಚನಾ ಘಟಕಗಳನ್ನು ಸ್ಥಾಪಿಸಿ ಮುಂದೆ ಬರಬಹುದಾದ ರೋಗಗಳ ಕೀಟಗಳ ಹತೋಟಿಗೆ ಅವಶ್ಯಕ ಮಾಹಿತಿಯನ್ನು ರೈತರಿಗೆ ಒದಗಿಸುವುದು.

**ಸಾವಯವ ಕೃಷಿ**

1. ಸ್ಥಳೀಯವಾಗಿ ಲಭ್ಯವಿರುವ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಅತಿ ಕಡಿಮೆ ಖರ್ಚಿನಲ್ಲಿ ಎರೆಹುಳ್ಳು ಗೊಬ್ಬರ,ಬಯೋಡೈಜೆಸ್ಟರ್ ಗಳನ್ನು ನಿರ್ಮಿಸಲು ಪ್ರೋತ್ಸಾಹಿಸುವುದು.
2. ಸಾವಯವ ಪರಿವರ್ತನೆಗೆ ರೈತರನ್ನು ಪ್ರೋತ್ಸಾಹಿಸುವುದು.
3. ಸಾವಯವ ಕೃಷಿ ದೃಢೀಕರಣ ವ್ಯವಸ್ಥೆ ಹೊಂದಲು ಮಾಹಿತಿ ನೀಡುವುದು.
4. ಸಾವಯವ ಕೃಷಿ ಅಳವಡಿಕೆ ಕುರಿತು, ಸಾವಯವ ಕೃಷಿಕರಿಗೆ ,ಇಲಾಖಾ ವಿಸ್ತರಣಾಧಿಕಾರಿಗಳಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡುವುದು.
5. ಇಲಾಖಾ ತೋಟಗಾರಿಕಾ ಕ್ಷೇತ್ರಗಳಲ್ಲಿ ಮಾದರಿ ಸಾವಯವ ತೋಟ ನಿರ್ಮಾಣ ಮಾಡಿಸುವುದು.

**ಜೇನು ಕೃಷಿ**

1. ರೈತರ ತೋಟಗಳಲ್ಲಿ ಜೇನು ಸಾಕಣೆಗೆ ಪ್ರೋತ್ಸಾಹಿಸುವುದು.
2. ಜೇನು ಸಾಕಾಣಿಕೆ ಸೊಸೈಟಿಗಳ ಮೂಲಕ ರೈತರಿಗೆ ತರಬೇತಿ ಏರ್ಪಡಿಸುವುದು.
3. ರೈತರ ತೋಟಗಳ ಬೆಳೆಗಳಲ್ಲಿನ ಪರಾಗ ಸ್ಪರ್ಶ ಹೆಚ್ಚಳದಲ್ಲಿ ಜೇನು ಹುಳುಗಳ ಪಾತ್ರದ ಬಗ್ಗೆ ರೈತರಿಗೆ ಅರಿವು ಮೂಡಿಸುವುದು.

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**ಕೊಯ್ಲೋತ್ತರ ನಿರ್ವಹಣೆ.**

1. ತೋಟಗಾರಿಕ ಬೆಳೆಗಳಾದ ಹಣ್ಣು,ತರಕಾರಿ ತೋಟದ ಬೆಳೆಗಳು ಔಷಧಿ ಸಸ್ಯಗಳು ಮತ್ತು ಸುಗಂಧ ದ್ರವ್ಯ ಬೆಳೆಗಳ ಕೊಯ್ಲೋತ್ತರ ನಿರ್ವಹಣೆಗೆ ಪ್ರೋತ್ಸಾಹಿಸುವುದು
2. ತೋಟಗಾರಿಕ ಬೆಳೆಗಳ ಅವಶ್ಯಕತೆಗೆ ತಕ್ಕಂತೆ ಪ್ಯಾಕ್ ಹೌಸ್ ಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು
3. ಶೀತಲ ಗೃಹ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು
4. ತೋಟಗಾರಿಕ ಬೆಳೆಗಳ ಪ್ರಾಥಾಮಿಕ ಸಂಸ್ಕರಣ ಘಟಕ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು

**ತೋಟಗಾರಿಕ ಬೆಳೆಗಳಿಗೆ ಮಾರುಕಟ್ಟೆ ಅಭಿವೃದ್ಧಿ**

1. ಮಾರು ಕಟ್ಟೆಯಲ್ಲಿ ನಿರತರಾದ ಸಂಸ್ಥೆಗಳಾದ ಹಾಪ್ ಕಾಮ್ಸ್ ಜಿಲ್ಲಾ ತೋಟಗಾರಿಕ ಬೆಳೆಗಾರರ ಸಂಘಗಳು ,APMC ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಸಗಟು ಮಾರುಕಟ್ಟೆ ಅಭಿವೃದ್ಧಿಗೆ ಸಹಾಯ ಧನ ಒದಗಿಸುವುದು.
2. ಗ್ರಾಮೀಣ ಮಾರುಕಟ್ಟೆ ,ರೈತ ಸಂತೆ, ನೇರ ಮಾರುಕಟ್ಟೆ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು

**ಇತರೆ ಕಾರ್ಯಗಳು**

1. ಜಿಲ್ಲೆಯ ಜಿಲ್ಲಾಧಿಕಾರಿಗಳು,ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ,ಮಾನ್ಯ ತೋಟಗಾರಿಕ ನಿರ್ದೇಶಕರು ಮತ್ತಿತರ ಮೇಲಾಧಿಕಾರಿಗಳು ಸೂಚಿಸುವ ವಿಶೇಷ ಕೆಲಸಗಳನ್ನು ನಿರ್ವಹಿಸುವುದು.
2. ಜನಸ್ಪಂದನಾ ಸಭೆ ಮುಂತಾದ ಸಭೆಗಳಿಗೆ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು
3. ಪ್ರಕೃತಿ ವಿಕೋಪ ಮುಂತಾದ ಸಮಯಗಳಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಕೆಲಸ ನಿರ್ವಹಿಸುವುದು.
4. ಇನ್ನಿತರೆ ಕಾಲಕಾಲಕ್ಕೆ ಸೂಚಿಸಲಾಗುವ ವಿಶೇಷ ಕಾರ್ಯ ನಿರ್ವಹಿಸುವುದು.

**4 B (II) ಅಧಿಕಾರ/ನೌಕರರುಗಳ ಅದಿಕಾರ ಮತ್ತು ಕರ್ತವ್ಯಗಳು.**

| | |
|---|---|
| **ತೋ.ಉ.ನಿ** | ಜಿಲ್ಲೆಯ ತೋಟಗಾರಿಕ ಇಲಾಖೆಗೆ ಸಂಬಂದಿಸಿದಂತೆ ರಾಜ್ಯ ವಲಯ,ಜಿಲ್ಲಾವಲಯ,ಕೇಂದ್ರ ವಲಯ ಹಾಗೂ NHM, MIS ಯೋಜನೆಗಳಿಗೆ ಸಂಬಂಧಿಸಿದಂತೆ ತೋಟಗಾರಿಕೆ ಉಪ ನಿರ್ದೇಶಕರ ಹುದ್ದೆಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯೊಳಗೆ ಅಭಿವೃದ್ಧಿ ಹಾಗೂ ಆಡಳಿತ ಕೆಲಸ ನಿರ್ವಹಿಸಲು,ಅಧಿಕಾರ ಮೀರಿದ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಕೇ.ಕ.ಸ:** | ಎಲ್ಲಾ ಶಾಖೆಗಳ ಸಮಬಂದಿಸಿದಂತೆ ತಾಂತ್ರಿಕ ಸಹಾಯಕರು ಹಾಗೂ ಅಧೀಕ್ಷಕರು ಸಲ್ಲಿಸುವ ಕಡತಗಳನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿ ತೋಟಗಾರಿಕ ಉಪನಿರ್ದೇಶಕರವರಿಗೆ ಮಂಡಿಸುವುದು.ಪ್ರಮುಖ ವಿಷಯಗಳನ್ನು ತೋಟಗಾರಿಕ ಉಪನಿರ್ದೇಶಕರವರೊಂದಗೆ ಚರ್ಚಿಸಿ ತಮ್ಮ ಅಧೀನ ಸಿಬ್ಬಂದಿಗಳೊಂದಿಗೆ ಕಡತವನ್ನು ಶೀಘ್ರವಾಗಿ ಇತ್ಯರ್ಥ ಪಡಿಸಲು ಕ್ರಮ ವಹಿಸುವುದು. ತೋಟಗಾರಿಕ ಉಪನಿರ್ದೇಶಕರವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕೆಲಸಗಳ ನಿರ್ವಹಣೆ,ಅಧೀಕ್ಷಕರ ಸಹಕಾರದೊಂದಿಗೆ ಎಲ್ಲಾ ಆಡಿಟ್ ಕಡತಗಳನ್ನು ಪರಿಶೀಲಿಸಿ ವೀಲೆವಾರಿ ಕ್ರಮ ವಹಿಸುವುದು.ಅಧಿನ ಕಛೇರಿಗಳ ವಾರ್ಷಿಕ ತಪಾಸಣೆ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| ತಾ.ಸ: | ಜಿಲ್ಲಾವಲಯ, ರಾಜ್ಯವಲಯ, ರಾತೋಮಿ, ಹನಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಕಡತ ನಿರ್ವಹಣೆ, ತಾಲ್ಲೂಕುವಾರು ಎಂ.ಎಂ.ಆರ್. ಸಿದ್ದಪಡಿಸುವುದು, ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು ಹಾಗೂ ಇತರ ಸುತ್ತೋಲೆಗಳನ್ನು ತಾಲ್ಲೂಕು ಅಧಿಕಾರಿಗಳಿಗೆ ರವಾನಿಸುವುದು, ಕಾರ್ಯಕ್ರಮ/ಯೋಜನೆಗಳ ಅನುಷ್ಟಾನ ಕುರಿತು ಗಮನ ನೀಡುವುದು, ಯೋಜನೆ/ಕಾರ್ಯಕ್ರಮಗಳ ವರಧಿ ನೀಡುವುದು ಹಾಗೂ ತಾಂತ್ರಿಕ ಮಂಜೂರಾತಿ ಅಗತ್ಯವಿದ್ದಲ್ಲಿ ನೀಡುವುದು. ಫಲಾನುಭವಿ ಪಟ್ಟಿ ತಾಲ್ಲುಕುಗಳಿಂದ ಸಂಗ್ರಹಿಸುವುದು, ಯೋಜನೆ/ಕಾರ್ಯಕ್ರಮಗಳಿಗೆ ಸಂಬಂಧಿಸಿದ ಎಲ್ಲಾ ವರಧಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ರಾಜ್ಯವಲಯ ಯೋಜನೆಗಳಿಗೆ ಸಂಬಂಧಿಸಿದ ವಿಧಾನಸಬೆ/ಲೋಕಸಭೆ, ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ತಾಲ್ಲೂಕುಗಳಿಂದ ಪಡೆಯುವುದು ಹಾಗೂ ಕ್ರೂಡಿಕೃತ ವರಧಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

| | |
|---|---|
| | ಜಿಲ್ಲಾ/ತಾಲ್ಲೂಕು ಪಂಚಾಯತ್ ಯೋಜನೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮಂಜೂರಾತಿಯನ್ನು ಅಗತ್ಯವಿದ್ದಲ್ಲಿ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಖಊಸುವುದು. ತೋಟಗಾರಿಕೆ ಬೆಳೆಗಳ ಮೌಲ್ಯ ಮಾಪನವನ್ನು ವರಧಿಯನ್ನು ಪರಿಶೀಲಿಸುವುದು. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಜಿಲ್ಲಾ ಪಂಚಾಯತ್ ತೋಟಗಾರಿಕೆ ಕ್ಷೇತ್ರಗಳ ಫಸಲು ಹರಾಜು ಪ್ರಕ್ರಿಯೆ ಜವಾಬ್ದಾರಿ ವಹಿಸುವುದು ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| ಅಧೀಕ್ಷಕರು | ಎಲ್ಲಾ ವಿಷಯ ನಿರ್ವಾಹಕರು /ಪ್ರ.ದ.ಸ ಮಂಡಿಸಿದ ಕಡತಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ ಅಧಿಕಾರಿಗಳಿಗೆ ಮಖಊಸುವುದು.ಲೆಕ್ಕ ತಪಾಸಣೆ ವರದಿಗಳಿಗೆ ಅನುಸರಣ ಉತ್ತರಗಳನ್ನು ಸಲ್ಲಿಸುವುದು ಮತ್ತು ವಿಚಾರಣೆ ಕಡತಗಳ ನಿರ್ವಾಹಣೆ ,ಕಛೇರಿಯ ಮಯಖ್ಯಸ್ಥರೊಂದಿಗೆ ತಾಲ್ಲೂಕು ಮಟ್ಟದ ಕಛೇರಿಗಳ ವಾರ್ಷಿಕ ತಪಾಸಣೆ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಪ್ರ.ದ.ಸ:** | ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿಖಮಗಳನ್ವಯ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿ ನಿಖಮಗಳ ಪ್ರಕಾರ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು. ನಗಧು ಪುಸ್ತಕಗಳ ನಿರ್ವಹಣೆ,ರಾಜ್ಯವಲಖ ಹಾಗೂ ಇತರ ವಿಶೇಷ ಯೋಜನೆಗಳ ತಾಲ್ಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು,ಮಂಜೂರಾತಿ ಕ್ರಮವಹಿಸುವುದು,ವಿವಿಧ ಯೋಜನೆಗಳ ಅನುದಾನ ಬಿಡುಗಡೆ ಬಗ್ಗೆ ಕ್ರಮಬಹಿಸುವುದು ಸರ್ಕಾರಿ ಆದೇಶ/ಸುತ್ತೋಲೆಗಳ ಕಡತ ನಿರ್ವಹಣೆ,ಕಛೇರಿ ಆದೇಶ ಪುಸ್ತಕ ನಿರ್ವಹಣೆ ಅಧಿಕಾರಿ/ಸಿಬ್ಬಂದಿಗಳ ರಜೆ,ವೇತನ ಬಡ್ತಿ ಪಿಂಚಣಿ ಸೌಲಭ್ಯ ಇತ್ಯದಿ ಕಡತಗಳ ನರ್ವಹಣೆ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ದ್ವಿ.ದ.ಸ:** | ಕಡತಗಳ ರಚನೆ, ವಿಷಯವಹಿ ರಚನೆ, ಕಡತಗಳ ಚಲನವಲನ ,ಕಡತಗಳ ಕಾಯುವಿಕೆ,ವೇತನ ಬಿಲ್ಲು. ಡಿ.ಸಿಬಿಲ್ಲು. ಎ.ಸಿ ಬಿಲ್ಲು, ಎನ್.ಡಿ.ಸಿಬಿಲ್ಲು,ಪ್ರವಾಸಭತ್ಯೆ ಬಿಲ್ಲು ತಖರಿಸುವುದು ಹಾಗೂ ಸಖಂಧಿಪಟ್ಟ ವಹಿಗಳ ನಿರ್ವಹಣೆ ಮಾಸಿಕ ಖರ್ಚು ಆದಾಯ ತ:ಖ್ತೆ ತಯಾರಿಸುವುದು.<br>ಸಾದಿಲ್ವಾರು ಇತರೆ ಬಿಲ್ಲುಗಳಿಗೆ ಮಂಜೂರಾತಿ ಕ್ರಮ ಕೈಗೊಳ್ಳವುದು, ಜಿಲ್ಲಾ ಪಂಚಾಯತ್ ತಾಲ್ಲೂಕುಪಂಚಾಯತ್ ನಿಧಿಗೆ ಸಂಬಂದಿಸಿದ ತಾಲ್ಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಖಊಸುವುದು ಮತ್ತು ಸದರಿ ಖೋಜನೆಗಳ ಅನುದಾನ ಬಿಡುಗಡೆ ಕ್ರಮ ಕೈಗೊಳ್ಳುವುದು ಖರ್ಚು ಮತ್ತು ಆದಾಯದ ಬಗ್ಗೆ ವರದಿ ಸಿದ್ದಪಡಿಸುವುದು, ವೈದ್ಯಕೀಯ ಬಿಲ್ಲುಗಳನ್ನು ತಖರಿಸುವುದು ಹಾಗ ೂ ಮೇಲಾದಿಕಾರಿಗಳ ಆದೇಶ ಪಾಲಿಸುವುದು. |
| **ಬೆರಳಚ್ಚುಗಾರರು:** | ಶಾಖೆಗಳ ಎಲ್ಲಾ ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು ಬೆರಳಚ್ಚು ಮಾಡಿದ ಪ್ರತಿಗಳ ಲೆಕ್ಕವನ್ನು ನಿರ್ವಹಿಸುವುದು ಹಾಗೂ ಗಣಕಯಂತ್ರದ ಕೆಲಸ ನಿರ್ವಹಿಸುವುದು. ಪತ್ರಗಳನ್ನು ಸ್ವಿಕರಿಸುವುದು ಟಾಪಲುಗಳನ್ನು ಶಾಖೆಯಲ್ಲಿ ಹಂಚುವುದು,ಸ್ಟಾಂಪ್ ವಹಿ ನಿರ್ವಹಣೆ ಮಾಡುವುದು ಹಾಗೂ ಮೇಲಾದಿಕಾರಿಗಳ ಆದೇಶ ಪಾಲಿಸುವುದು. |
| **ವಾಹನ ಚಾಲಕರು:** | ಇಲಾಖೆಯ ವಾಹನವನ್ನು ವ್ಯವಸ್ಥಿತ ರೀತಿಯಲ್ಲಿ ಸುಸಜ್ಜಿತವಾಗಿ ಇರಿಸಿಕೊಳ್ಳುವುದು ಇಲಾಖ ವಾಹನದ ಲಾಗ್ ಬುಕ್ ನಿರ್ವಹಿಸುವುದು ಇಲಾಖ ವಾಹನಕ್ಕೆ ಸಂಬಂದಿಸಿದ ದುರಸ್ಥಿ ವಿಮಾ ಮರು ನೊಂದಣಿ ಅವಶ್ಯಕ ದೃಡಿಕರಣವನ್ನು ಸಾರಿಗೆ ಅಧಿಕಾರಿಗಳಿಂದ ಪಡೆಯುವುದು,ವಾಹನಕ್ಕೆ ಸಂಬಂದಿಸಿದ ಎಲ್ಲಾ ಮಾಹಿತಿಗಳನ್ನು ನಿರ್ವಹಿಸುವುದು ಹಾಗೂ ಮೇಲಾದಿಕಾರಿಗಳ ಆದೇಶ ಪಾಲಿಸುವುದು. |
| **ಸೇವಕರು:** | ಕಛೇರಿಯನ್ನು ಶುಚಿಯಾಗಿಡುವುದು,ಕಡತ ಮತ್ತು ಟಾಪಾಲುಗಳನ್ನು ಶಾಖೆಗಳಿಗೆ ತೆಗೆದು ಕೊಂಡು ಹೋಗುವುದು ಪತ್ರಗಳ ವಿತರಣೆ ಅಂಚೆ ಕಛೇರಿಗೆ ಹೋಗಿ ಬರುವುದು ಸರ್ಕಾರಿ ಸುತ್ತೋಲೆಗಳನ್ನು ಸಂಬಂದಿಸಿದ ಎಲ್ಲಾ ಕಛೇರಿಗಳಿಗೆ ವಿತರಿಸುವುದು,ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವುದು ಹಾಗೂ ಮೇಲಾದಿಕಾರಿಗಳ ಆದೇಶ ಪಾಲಿಸುವುದು. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**4 B (III) ನಿಯಮ ತೆಗೆದುಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ, ಚಾನಲ್ ಗಳ ಮತ್ತು ಅಕೌಂಟೆಬಲಿಟಿ ಸೇರಿದಂತೆ**

| | |
|---|---|
| ತೋ.ಉ.ನಿ: | ಪ್ರಸ್ತಾವನೆಗಳ ಕುರಿತು ತೆಗೆದುಕೊಳ್ಳುವ ಕ್ರಮದ ಬಗ್ಗೆ ತೀರ್ಮಾನಿಸುವುದು, ತಮ್ಮ ಹುದ್ದೆಗೆ ನೀಡಿದ ಅಧಿಕಾರಿ ವ್ಯಾಪ್ತಿಯೊಳಗೆ ಅನುಮೋದಿಸಿ ಮಂಜೂರಾತಿ ನೀಡುವುದು ಅಗತ್ಯ ಸಂದರ್ಬದಲ್ಲಿ ಮೇಲಾಧಿಕಾರಿಗಳಿಗೆ ಶಿಪಾರಸ್ಸು ಮಾಡುವುದು. |
| **ಕೇ.ಕ.ಸ:** | ಕಛೇರಿಯ ಎಲ್ಲಾ ಶಾಖೆಗಳಿಗೆ ಸಂಬಂದಿಸಿದಂತೆ ತಾಂತ್ರಿಕ ಸಹಾಯಕರು ಮಂಡಿಸಿದ ಕಡತಗಳನ್ನಂು ಪರಿಶೀಲಿಸಿ ಮಂಡಿಸುವುದು ಪ್ರಮುಖ/ತುರ್ತು ವಿಷಯಗಳನ್ನು ತೋ.ಉ.ನಿ ರವರೊಂದಿಗೆ ಚರ್ಚಿಸಿ ತಮ್ಮ ಅಧೀನ ಸಿಬ್ಬಂದಿಗಳಿಂದ ಕಡತವನ್ನು ಶೀಘ್ರವಾಗಿ ವಿಲೇವಾರಿ ಕ್ರಮ ಕೈಗೊಳ್ಳುವುದು. |
| **ತಾಸ:** | ತಮ್ಮ ವ್ಯಾಪ್ತಿಗೆ ಸೇರಿದ ಇಲಾಖೆಯ ಎಲ್ಲಾ ಯೋಜನೆಗಳ ಕಡತ/ಕೆಲಸ ನಿರ್ವಹಣೆ ಹಾಗೂ ಮೌಲ್ಯ ಮಾಪನ ವಿಷಯಕ್ಕೆ ಸಂಬಂದಿಸಿದ ಎಲ್ಲಾ ಕೆಲಸ ಕಾರ್ಯಗಳನ್ನು ಅಚ್ಚು ಕಟ್ಟಾಗಿ ನಿರ್ವಹಿಸಿ ಕಡತಗಳನ್ನು ವಿಳಂಬ ಮಾಡದೇ ಮುಂದಿನ ಆದೇಶಕ್ಕಾಗಿ ಹಾಗೂ ಕ್ರಮಕ್ಕಾಗಿ ಮಂಡಿಸುವುದು. |
| **ಸ.ಸಾಂ.ಅ:** | ಮೇಲಾಧಿಕಾರಿಗಳ ಸೂಚನೆ ಅನುಸಾರವಾಗಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಂಕಿಅಂಶಗಳನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿ ದೋಷರಹಿತ ಮಾಹಿತಿಯನ್ನು ತಯಾರಿಸಿ ನಿಗದಿತ ಅವಧಿಯೊಳಗೆ ಮಂಡಿಸಿವುದು. |
| **ಅಧೀಕ್ಷಕರು:** | ತಮ್ಮ ವ್ಯಾಪ್ತಿಗೆ ಸಂಬಂದಿಸಿದ ಶಾಖೆಯ ವಿಷಯ ನಿರ್ವಾಹಕರು /ಪ್ರ.ದ.ಸ ಮಂಡಿಸಿದ ಕಡತಗಳನ್ನು ಆ ಪ್ರಕರಣದಲ್ಲಿ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎನ್ನುವ ಬಗ್ಗೆ ನಿಯಮಗಳನ್ನು ನಮೂದಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ಮಂಡಿಸುವುದು. |
| **ವಿಷಯ ನಿರ್ವಾಹಕರು/ ಪ್ರ.ದ.ಸ:** | ತಾವು ಸ್ವಿಕರಿಸಿದ ಪತ್ರಗಳ ಸಂಬಂದ ನಿಯಮಗಳು ಸರ್ಕಾರಿ ಆದೇಶಗಳು,ಸುತ್ತೋಲೆಗಳು ಇತ್ಯಾದಿ ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ಬಿಲ್ಲುಗಳನ್ನು ಆದೇಶಗಳನ್ನು ನಗಧು ವಹಿಯನ್ನು ವಿಳಂಬ ಮಾಡದೇ ಮಂಡಿಸುವುದು. |
| **ಬೆರಳಚ್ಚುಗಾರರು:** | ಬೆರಳಚ್ಚು ಸಲುವಾಗಿ ನೀಡಿರುವ ಎಲ್ಲಾ ಪತ್ರಗಳನ್ನು ಸ್ವಷ್ಟವಾಗಿ ಬೆರಳಚ್ಚು ಮಾಡಿ ತ್ವರಿತವಾಗಿ ಮಂಡಿಸುವುದು. |

**4 B (IV) ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗದಿಪಡಿಸಲಾದ ವಿಧಾನಗಳು ,ಕಟ್ಟುಪಾಡುಗಳು.**

| | |
|---|---|
| ತೋ.ಉ.ನಿ: | ಜಿಲ್ಲೆಯಲ್ಲಿ ತೋಟಗಾರಿಕೆ ಉಪನಿರ್ದೇಶಕರಿಗೆ ವಹಿಸಿದ ಅಭಿವೃದ್ಧಿ,ವಿಸ್ತರಣೆ ಹಾಗೂ ಆಡಳಿತ ನಿರ್ವಹಣೆ ಅಧೀನ ಅಧಿಕಾರಿ/ಸಿಬ್ಬಂದಿಗಳಿಂದ ಯಶಸ್ವಿಯಾಗಿ ಮತ್ತು ಶೀಘ್ರವಾಗಿ ನಿರ್ವಹಿಸಲು ಕ್ರಮವಹಿಸುವುದು.ಇಲಾಖೆಯ ಜಿಲ್ಲಾ ಉಸ್ತುವಾರಿ ವಹಿಸುವುದು. |
| **ಕೇ.ಕ.ಸ:** | ಕಛೇರಿ ಎಲ್ಲಾ ಶಾಖೆಗಳಿಂದ ಬರುವ ಕಡತ/ವಹಿಗಳನ್ನು ಪರಿಶೀಲಿಸಿ ತೋ.ಉ.ನಿ ರವರಿಗೆ ಮಂಡಿಸುವುದು,ತುರ್ತು ವಿಷಯಗಳ ಕುರಿತು ತೋ.ಉ.ನಿ ರವರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದು ಹಾಗೂ ತೋ.ಉ.ನಿ ರವರ ಅನುಪಸ್ಥಿಯಲ್ಲಿ ಕಛೇರಿಯ ದೈನಂದಿನ ಕೆಲಸ ನಿರ್ವಹಿಸುವುದು. |
| **ತಾ.ಸ:** | ತಾಂತ್ರಿಕ ಸಹಾಯಕರು ಆಯಾ ವಿಭಾಗಕ್ಕೆ ಸಂಬಂಧಿಸಿದ ನಿಯಮಾನುಸಾರ ಕಡತಗಳನ್ನು ಮತ್ತು ವರಧಿಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ ಕೆ.ಕ.ಸ/ತೋ.ಉ.ನಿ ರವರಿಗೆ ಮಂಡಿಸುವುದು. |
| **ಸ.ಸಾಂ.ಅ:** | ಮೇಲಾಧಿಕಾರಿಗಳ ಸೂಚನೆ ಹಾಗೂ ನಿಯಮಾನುಸಾರ ಜಿಲ್ಲಾ ಮಟ್ಟದ ಅಂಕಿ ಅಂಶಗಳನ್ನು ಸಂಗ್ರಹಿಸಿ ದೋಷರಹಿತ ಮಾಹಿತಿ ತಯಾರಿಸಿ ಒಪ್ಪಿಸುವುದು. |
| **ಅಧೀಕ್ಷಕರು:** | ಕಛೇರಿ ವಿಷಯ ನಿರ್ವಾಹಕರುಗಳು ಮಂಡಿಸುವ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಮುಂದಿನ ಆದೇಶ ಕೋರಿ ಕೆ.ಕ.ಸ/ತೋ.ಉ.ನಿ ರವರಿಗೆ ಮಂಡಿಸುವುದು. |
| **ಪ್ರ.ದ.ಸ:** | ಹಂಚಿಕೆಯಾದ ವಿಷಯಗಳನ್ನು ಸಮರ್ಪಕವಾಗಿ ನಿಯಮಗಳ ಪ್ರಕಾರ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿಯ ನಿಯಮಾನುಸಾರ ಮುಂದಿನ ಆದೇಶ ಕೋರಿ ಕಡತ/ಬಿಲ್ಲು/ನಗದು ವಹಿ ಮಂಡಿಸುವುದು. |
| **ದ್ವಿ.ದ.ಸ:** | ಆವಕ ಜಾವಕ ಮತ್ತು ಆದಾಯ ಖರ್ಚಿನ ತಖ್ತೆ,ಡಿಸಿ ಬಿಲ್ಲುಗಳ ನಿಯಮಾನುಸಾರ ಮಾಡುವುದು ಹಾಗೂ ಮೇಲಾಧಿಕಾರಿಗಲ ಆಧೇಶ ಪಾಲಿಸುವುದು. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

| | |
|---|---|
| **ಬೆರಳಚ್ಚುಗಾರರು:** | ಕಛೇರಿಯ ಎಲ್ಲಾ ಬೆರಳಚ್ಚು ಕಾರ್ಯಗಳನ್ನು ದೋಷರಹಿತ ನಿರ್ವಹಿಸುವುದು,ಬೆರಳಚ್ಚು ಮಾಡಿದ ಪ್ರತಿಗಳನ್ನು ಲೆಕ್ಕ ಇಡುವುದು ಹಾಗೂ ಗಣಕಯಂತ್ರದ ಕೆಲಸ ನಿರ್ವಹಿಸುವುದು. |
| **ವಾಹನ ಚಾಲಕರು:** | ವಹಿಸಲಾದ ಎಲ್ಲಾ ಕೆಲಸಗಳನ್ನು ವಿಳಂಬ ಮಾಡದೇ ಸಮರ್ಪಕವಾಗಿ ನಿರ್ವಹಿಸುವುದು. |
| **ಸೇವಕರು:** | ವಹಿಸಲಾದ ಎಲ್ಲಾ ಕೆಲಸಗಳನ್ನು ವಿಳಂಬ ಮಾಡದೇ ಸಮರ್ಪಕವಾಗಿ ನಿರ್ವಹಿಸುವುದು. |

**4 B (V) ನೌಕರರ ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ/ಉಪಯೋಗಿಸುವ/ನಿಯಂತ್ರಣದಲ್ಲಿಟ್ಟುಕೊಂಡಿರುವ ನಿಯಮಗಳು/ ಸೂಚನೆಗಳು/ಕೈಪಿಡಿಗಳು/ದಾಖಲೆಗಳು ಮತ್ತು ನಿಬಂಧನೆಗಳು.**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು
2. ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿ.ಸಿ.ಎ ನಿಯಮಾವಳಿ)
3. ಕರ್ನಾಟಕ ಆರ್ಥಿಕ ಸಂಹಿತೆ.
4. ಕಛೇರಿ ಕೈಪಿಡಿ
5. ವೃಂದ ಮತ್ತು ನೇಮಕಾತಿ ನಿಯಮಗಳು
6. ಆಯವ್ಯಯ ಕೈಪಿಡಿ
7. ಕರ್ನಾಟಕ ಖಜಾನೆ ಸಂಹಿತೆ
8. ಸಾದಿಲ್ವಾರು ವೆಚ್ಚದ ಕೈಪಿಡಿ
9. ಕರ್ನಾಟಕ ನಾಗರೀಕ ಸೇವಾ ನಡೆತೆ ನಿಯಮ
10. ಕರ್ನಾಟಕ ಪಾರದರ್ಶಕತೆ ಅಧಿ ನಿಯಮ-1999
11. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1999
12. ಮಾಹಿತಿ ಹಕ್ಕು ಅಧಿ ನಿಯಮ 2005
13. ರಾಷ್ಟ್ರೀಯ ತೋಟಗಾರಿಕ ಮಿಷನ್ ಯೋಜನೆಯ ಮಾರ್ಗಸೂಚಿಗಳು
14. ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಗಳು
15. ರಾಜ್ಯ ವಲಯ ಹಾಗೂ ಜಿಲ್ಲಾ ಪಂಚಾಯತ್ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು
16. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ
17. ಇಲಾಖೆ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ್ ಮತ್ತು ವಿಶೇಷ ಡೆಲಿಗೇಷನ್ ಆಫ್ ಪಾವರ್ಸ್
18. ಸರ್ಕಾರದ ಅಧಿಸೂಚನೆಗಳು (ಸುತ್ತೋಲೆಗಳು)
19. ಇಲಾಖೆಯಿಂದ ಹೊರಡಿಸಿದ ವಿಶೇಷ ಆದೇಶಗಳು ಮತ್ತು ಸುತ್ತೋಲೆಗಳು.
20. ಸುವರ್ಣ ಭೂಮಿ ಯೋಜನೆಯ ಮಾರ್ಗಸೂಚಿಗಳು.
21. ಸಮಗ್ರ ತೋಟಗಾರಿಕೆ ಅಭಿವೃದ್ದಿ ಯೋಜನೆಯ ಮಾರ್ಗ ಸೂಚಿಗಳು.

**4 B (VI) ಕಡತ ಶೀರ್ಷಿಕೆ**

| ಕ್ರ.ಸಂ | ಕಡತದ ಶಾಖೆ | | ದಾಖಲಾತಿಗಳ ಉಲ್ಲೇಖ |
|---|---|---|---|
| 1. | ಸಿಬ್ಬಂದಿ | EST | ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಶಿಸ್ತು, ನಡತೆ, ಮತ್ತು ಇತರೆ ವಿಷಯಗಳು. |
| 2. | ಲೆಕ್ಕ ಶಾಖೆ | Accounts | ಲೆಕ್ಕ ಪತ್ರ ಹಾಗೂ ಲೆಕ್ಕಪತ್ರಗಳ ಪರಿಶೀಲನೆ ನಗದು ವಹಿ ನಿರ್ವಹಣೆ ಇತ್ಯಾದಿ. |
| 3. | ಲೆಕ್ಕ ತಪಾಸಣೆ | Audit | ಮಹಾಲೇಖಾ ಪಾಲಕರು,ನಿರ್ದೇಶನಾಲಯ ಹಾಗೂ ಜಿಲ್ಲಾ ಪಂಚಾಯತ್ ಕಛೇರಿಗಳ ಲೆಕ್ಕ ತಪಾಸಣೆ ಪರಿಶೀಲನೆ ಹಾಗೂ ಅನುಸರಣಾ ಉತ್ತರ ನಿರ್ವಹಣೆ. |
| 4. | ತಾಂತ್ರಿಕ ಸಹಾಯಕರು | TA | ತಾಂತ್ರಿಕ ವಿಭಾಗದ ಎಲ್ಲಾ ಕೆಲಸಗಳ ನಿರ್ವಹಣೆ, ವಿಶೇಷ ಯೋಜನೆಗಳಿಗೆ ತಾಂತ್ರಿಕ ಕಡತಗಳ ನಿರ್ವಹಣೆ. |

- ಸಾಮಾನ್ಯ ಸ್ವಿಕೃತಿ

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

- ನಮೂನೆ VIII ರವಾನೆ ರಿಜಿಸ್ಟರ್
- ನಮೂನೆ-ಎ ಮುದ್ದಾಮ ರಿಜಿಸ್ಟರ್
- ನಿಯಮ 27(ನಿಯಮ63)ಸ್ಟಾಂಪ್ ರಿಜಿಸ್ಟರ್
- ನಮೂನೆ-6(ನಿಯಮ38) ನಗದು ಪುಸ್ತಕ ರಿಜಿಸ್ಟರ್
- ಕ.ಅ.ಸ.ಪ್ರ ಪತ್ರ 1 (ಅನುಚ್ಛೇದ-6ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ)
- ಕ.ಖ.ಸಂ.65-ಎ ಬಿಲ್ಲು ಹಾಜರುಪಡಿಸುವ ಚೀಟಿ ರಿಜಿಸ್ಟರ್
- ಕ.ಆ.ಸಂ ನಮೂನೆ 62-ಎ ಪರಿವರ್ತನೆಯ ಸಲುವಾಗಿ ಬಿಲ್ಲುಗಳ ರಿಜಿಸ್ಟರ್
- ನಮೂನೆ ಸಂಖ್ಯೆ-24ಎ ವೇತನ ಬಟವಾಡೆ ಪುಸ್ತಕ (ನಮೂನೆ ಸಂಖ್ಯೆ24ಎ)
- ಆಕಸ್ಮಿಕ ರಜಾ ವಹಿ
- ತೋ.ಉ.ನಿ ಕಛೇರಿ ಅಧಿಕಾರಿ/ಸಿಬ್ಬಂದಿ ವರ್ಗದವರ ವೇತನ ಬಿಲ್ಲಿನಲ್ಲಿ ಕಡಿತಗೊಳ್ಳುವ ರಿಜಿಸ್ಟರ್ ಹಬ್ಬದ ಮುಂಗಡ 2
- ಸಾ.ಭ.ನಿ.ಕೆ.ಜಿ.ಐ.ಡಿ, ಎಲ್.ಐ. ಸಿ., ವೃತ್ತಿ ತೆರಿಗೆ, ಜಿ.ಐ.ಎಸ್.
- ಲೇಖನ ಸಾಮಗ್ರಿ ವಿತರಣಾ ರಿಜಿಸ್ಟರ್.
- ದಿನವಹಿ ದಾಸ್ತಾನು ಪುಸ್ತಕ ರಿಜಿಸ್ಟರ್
- ತೋ.ಉ.ನಿ (ಜಿಪಂ) ಚಿಕ್ಕಬಳ್ಳಾಪುರ ಕಛೇರಿಯ ಮಂಜೂರಾತಿ ಆದೇಶ ಪುಸ್ತಕ
- ಈ ಕಛೇರಿ ಸಾದಿಲ್ವಾರು ಪುಸ್ತಕ
- ಡಿ.ಸಿ. ಬಿಲ್ಲುಗಳನ್ನು ಮೇಲು ಸಹಿ ಮಾಡುವ ವಹಿ
- ಜಿಲ್ಲಾ ಪಂಚಾಯಿತ್‌ನಿಂದ ಬಂದ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡುವ ವಹಿ
- ನಮೂನೆ 24 ನಿಯಮ-58 ಪ್ರಯಾಣ ಭತ್ಯೆ ರಿಜಿಸ್ಟರ್ (ನಮೂನೆ-24(ನಿಮಯ-58)
- ಕ.ಅ.ಸಂ/74ರಲ್ಲಿ ನಿಗಧಿಪಡಿಸಿರುವ ನಮೂನೆ ಸರ್ಕಾರದ ಮೋಟಾರು ವಾಹನದ ಲಾಗ್ ಪುಸ್ತಕ
- ಮಾಹೆವಾರು ಖರ್ಚಿನ ತ:ಖ್ತೆಯ ರಿಜಿಸ್ಟರ್
- ಅಧಿಕಾರ/ಸಿಬ್ಬಂದಿಗಳ ಹಾಜರಾತಿ ಪಟ್ಟಿ ಕಡತ.
- ಸಾಮಾನ್ಯ ಭವಿಷ್ಯ ನಿಧಿಯ ಮುಂಗಡ ಡ್ರಾ ಮಾಡುವ ಕಡತ.
- ವಿದ್ಯುತ್ ಬಳಕೆ ಕಡತ.
- ವಿಷಯ ವಹಿ ರಿಜಿಸ್ಟರ್
- ನಮೂನೆ-14 ಅಂತಿಮ ವೇತನ ಪ್ರಮಾಣ ಪತ್ರ
- ಸಾದಿಲ್ವಾರು ಬಿಲ್ಲುಗಳ ವಿವರ
- ನಮೂನೆ 34-ಎ ಪೀಠೋಪಕರಣ ವಹಿ
- ಬಿ-7 ನಗದು ರಶೀದಿ
- ಅಧಿಕಾರಿ/ಸಿಬ್ಬಂದಿಯವರ ಕಾರ್ಯನಿರ್ವಾಹಣ ವರದಿ ಕಡತ.
- ಸಿಬ್ಬಂದಿಗಳ ಸೇವಾ ಪುಸ್ತಕ ರಿಜಿಸ್ಟರ್‌ಗಳು
- ಭಾರತ ಸರ್ಕಾರ ಮಾಹಿತಿ ಹಕ್ಕು ನಿಯಮ-2005
- ಸರ್ಕಾರ ಸುತ್ತೋಲೆಗಳ ಪೈಲ್
- ಲೆಕ್ಕ ತಪಾಸಣೆ ಪೈಲ್
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ನಗದು ಪುಸ್ತಕ ವಹಿ
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಡಿ.ಸಿ. ಬಿಲ್ಲುಗಳ ರಿಜಿಸ್ಟರ್
- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಚೆಕ್‌ಗಳನ್ನು ವಿತರಿಸುವ ಕಡತ.
- ಸೂಕ್ಷ್ಮ ನೀರಾವರಿ ಯೋಜನೆಯ ನಗದು ಪುಸ್ತಕ ವಹಿ
- ಸೂಕ್ಷ್ಮ ನೀರಾವರಿ ಯೋಜನೆಯ ಡಿ.ಸಿ. ಬಿಲ್ಲುಗಳ ರಿಜಿಸ್ಟರ್ ವಹಿ
- ಸೂಕ್ಷ್ಮ ನೀರಾವರಿ ಯೋಜನೆಯ ಚೆಕ್‌ಗಳನ್ನು ವಿವರಿಸುವ ಕಡತ.

## ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**4 B (VII) ಪಾಲಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂಧರ್ಭದಲ್ಲಿ ಇರುವ ಏರ್ಪಾಡುಗಳನ್ನು ಸಾರ್ವನಜನಿಕ ಸದಸ್ಯರುಗಳ ಸಹಭಾಗಿತ್ವ ಮುಖಿಾದ ವಿವರಗಳು.**

ಇಲಾಖೆ ಮಾರ್ಗ ಸೂಚಿ/ಎಂ.ಎಂ.ಆರ್. ಕಾರ್ಯಕ್ರಮಗಳು ಜಿಲ್ಲಾ ಪಂಚಾಯತ್ ಆದೇಶಗಳ ಅಡಿಯಲ್ಲಿ ಯೋಜನೆಗಳ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು.ಸಾರ್ವಜನಿಕ ಕುಂದುಕೊರತೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ನಿರ್ಧರಿಸಿ ಕ್ರಮ ಕೈಗೊಳ್ಳುವುದು.

**4 B (VIII) ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರು ಸಮಿತಿ ಅಥವಾ ಇತರ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಳು ನಡೆಸುವ ಸೇವೆ ಮತ್ತು ನಡವಳಿಗಳನ್ನು ಸಾರ್ವಜನಿಕರು ಆಕ್ಷೇಪಿಸಬಹುದೆ? ಅಥವಾ ಇಂತಹ ಸಭೆಗಳ ನಡವಳಿಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆಯೇ?**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಜಿಲ್ಲಾ ಸಮಿತಿ ಮತ್ತು ಕೇಂದ್ರವಲಯ ಸೂಕ್ಷ್ಮ ನೀರಾವರಿ ಯೋಜನೆಯಡಿ ಜಿಲ್ಲಾ ತಾಂತ್ರಿಕ ಸಮಿತಿಯ ಮೂಲಕ ಜಿಲ್ಲಗೆ ಅವಶ್ಯವಿರುವ ಯೋಜನೆಗಳನ್ನು ಸಿದ್ದಪಡಿಸುವುದು.ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬೇಕಾದ ಅವಶ್ಯಕ ನಿರ್ಣಯಗಳನ್ನು ತೆಗೆದುಕೊಳ್ಳುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಜಿಲ್ಲಾ ಸಮಿತಿ ಮತ್ತು ಜಿಲ್ಲಾ ತಾಂತ್ರಿಕ ಸಮಿತಿಗಳ ಸದಸ್ಯರುಗಳು ಮತ್ತು ಅವುಗಳ ವ್ಯಾಪ್ತಿ ಈ ಕೆಳಕಂಡಂತಿರುತ್ತದೆ.

**ಜಿಲ್ಲಾ ಸಮಿತಿ**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪ್ರತಿ ಜಿಲ್ಲೆಯಲ್ಲೂ (ರಾಜ್ಯದ ಎಲ್ಲಾ 29 ಜಿಲ್ಲೆಗಳಲ್ಲಿ) ಜಿಲ್ಲಾ ಮಟ್ಟದ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: No.AHD HPP 2005, ದಿನಾಂಕ:01/06/2005 ರಂತೆ ರಚಿಸಲಾಗಿದೆ, ಸಮಿತಿಯ ಸ್ವರೂಪವು ಕೆಳಕಂಡಂತಿರುತ್ತದೆ;

| | | |
|---|---|---|
| 1. | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, (ಜಿಲ್ಲಾ ಪಂಚಾಯತ್)----------------- | ಅಧ್ಯಕ್ಷರು |
| 2 | ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ --------------------- | ಸದಸ್ಯರು |
| 3. | ಉಪ ನಿಬಂಧಕರು, ಸಹಕಾರ ಇಲಾಖೆ ------------------------------------- | ಸದಸ್ಯರು |
| 4 | ಜಿಲ್ಲಾ ಮಾರುಕಟ್ಟೆ ಅಧಿಕಾರಿ -------------------------------------------- | ಸದಸ್ಯರು |
| 5 | ತೋಟಗಾರಿಕೆ ಉಪ ನಿರ್ದೇಶಕರು, (ಜಿಲ್ಲಾ ಪಂಚಾಯತ್)--------------------- | ಸದಸ್ಯ ಕಾರ್ಯದರ್ಶಿ |

**ಜಿಲ್ಲಾ ಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.**

- ಮಾಹಿತಿ ಸಂಗ್ರಹಣೆ
- ಕ್ರಿಯಾ ಯೋಜನೆಗಳ ತಯಾರಿಕೆ
- ಕಾರ್ಯಕ್ರಮಗಳ ಅನುಷ್ಠಾನಕ್ಕೆ ವ್ಯವಸ್ಥೆ ಮಾಡುವುದು.
- ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನದ ಸದ್ಬಳಕೆಯ ಬಗ್ಗೆ ಪರಿಶೀಲನೆ ಮತ್ತು ಭೌತಿಕ ಪ್ರಗತಿಯ ಪರಿಶೀಲನೆ.
- ಜಿಲ್ಲಾ ಮಟ್ಟದಲ್ಲಿ ವಿವಿಧ ಸಂಘ ಸಂಸ್ಥೆಗಳ ನಡುವೆ ಸಮನ್ವಯ ಏರ್ಪಡಿಸುವುದು.

ಜಿಲ್ಲಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಮಿತಿಯ ಅಧ್ಯಕ್ಷರ ಒಪ್ಪಿಗೆಯ ಮೇರೆಗೆ ಸಭೆಗಳನ್ನು ಕರೆಯತಕ್ಕದ್ದು ಮತ್ತು ಈ ಸಭೆಗಳ ಬಗ್ಗೆ ಸಂಪೂರ್ಣ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಜಿಲ್ಲಾ ಸಮಿತಿಯ ಪ್ರತಿ ಸಭೆಯ ನಡುವಳಿಗಳನ್ನು ದಾಖಲಿಸಿ ಅಧ್ಯಕ್ಷರ ಅನುಮೋದನೆ ಪಡೆದು ಸಮಿತಿಯ ಸದಸ್ಯರಿಗೆಲ್ಲಾ ಕಳುಹಿಸುವುದರ ಜೊತೆಗೆ ರಾಜ್ಯ ಮಿಷನ್ ಡೈರೆಕ್ಟರ್ ರವರಿಗೆ ಖಯಿದು ಪ್ರತಿಯನ್ನು ಸಲ್ಲಿಸುವುದು.

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**ಸೂಕ್ಷ್ಮ ನೀರಾವರಿ ಯೋಜನಯಡಿ ಜಿಲ್ಲಾ ಸಮಿತಿಯ ಮೂಲಕ ಜಿಲ್ಲೆಗೆ ಅವಶ್ಯವಿರುವ ಕಾರ್ಯಕ್ರಮಗಳನ್ನು ರೂಪಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.**

**ಎಲ್ಲಾ ಸಮಿತಿಯ ಈ ಕೆಳಕಂಡ ಸದಸ್ಯರು ಇರುತ್ತಾರೆ.**

ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು,

ಜಿಲ್ಲಾಪಂಚಾಯತ್, ಚಿಕ್ಕಬಳ್ಳಾಪುರ ಹಾಗೂ ಅಧ್ಯ ಕ್ಷರು ಜಿಲ್ಲಾ ಸೂಕ್ಷ್ಮ ನೀರಾವರಿ ಸಮಿತಿ

ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೆಜರ್, ಚಿಕ್ಕಬಳ್ಳಾಪುರ - ಸದಸ್ಯರು

ಕೃಷಿ ಜಂಟಿ ನಿರ್ದೇಶಕರು, ಚಿಕ್ಕಬಳ್ಳಾಪುರ - ಸದಸ್ಯರು.

ತೋಟಗಾರಿಕೆ ಉಪ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳ.

**4 B (IX) ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ದೂರವಾಣಿ ವಿವರಗಳ ಪಟ್ಟಿ**

| ಕ್ರ.ಸಂ | ಹುದ್ದೆ | ಹೆಸರು | ದುರವಾಣಿ ಸಂಖ್ಯೆ |
|---|---|---|---|
| 1. | ತೋಟಗಾರಿಕೆ ಉಪ ನಿರ್ದೇಶಕರು | ಶ್ರೀ ರಘು.ಬಿ | 08156-268760 |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇಕಸ) | ಶ್ರೀ ಅಂಜನ್ ಕುಮಾರ್.ಎಂ | 08156-268760 |
| 3. | ಸಹಾಯಕ ತೋಟಗಾರಿಕ ಅಧಿಕಾರಿ | ಶ್ರೀಮತಿ ಅಂಬಿಕಾ.ಡಿ.ಎಸ್ | 08156-268760 |
| 4. | ಅಧೀಕ್ಷಕರು | ಶ್ರೀ ರಾಜಣ್ಣ | 08156-268760 |
| 5. | ಪ್ರಥಮ ದರ್ಜೆ ಸಹಾಯಕರು | ಖಾಲಿ ಹುದ್ದೆ | 08156-268760 |
| 6. | ಬೆರಳಚ್ಚುಗಾರರು | ಖಾಲಿ ಹುದ್ದೆ | 08156-268760 |
| 7. | ದ್ವಿತಿಯ ದರ್ಜೆ ಸಹಾಯಕರು | ಶ್ರೀ ವಿ.ಗಜೇಂದ್ರ | 08156-268760 |
| 8. | ವಾಹನ ಚಾಲಕರು | ಶ್ರೀ ದೇವರಾಜು | 08156-268760 |
| 9. | ಸೇವಕ | ಖಾಲಿ ಹುದ್ದೆ | 08156-268760 |
| 10. | ತೋಟಗಾರಿಕೆ ಸಹಾಯಕರು | ಕೆಂಡಗಣ್ಣಪ್ಪ | 08156-268760 |

**4 B (X) ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಡಿಸೆಂಬರ್-2017ರ ಮಾಹೆಯ ವೇತನದ ವಿವರ.**

| | | | |
|---|---|---|---|
| 1. | ತೋಟಗಾರಿಕೆ ಉಪ ನಿರ್ದೇಶಕರು | ಶ್ರೀ ರಘು.ಬಿ | 51660 |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇಕಸ) | ಶ್ರೀ ಅಂಜನ್ ಕುಮಾರ್.ಎಂ | 36637 |
| 3. | ಸಹಾಯಕ ತೋಟಗಾರಿಕ ಅಧಿಕಾರಿ | ಶ್ರೀಮತಿ ಅಂಬಿಕಾ.ಡಿ.ಎಸ್ | 34131 |
| 4. | ಅಧೀಕ್ಷಕರು | ಶ್ರೀ ಹನುಮಂತರಾಜು.ಎಂ. | 19377 |
| 5. | ಪ್ರಥಮ ದರ್ಜೆ ಸಹಾಯಕರು | ಖಾಲಿ ಹುದ್ದೆ | 0 |
| 6. | ಬೆರಳಚ್ಚುಗಾರರು | ಖಾಲಿ ಹುದ್ದೆ | 0 |
| 7. | ದ್ವಿತಿಯ ದರ್ಜೆ ಸಹಾಯಕರು | ಶ್ರೀ ವಿ.ಗಜೇಂದ್ರ | 10166 |
| 8. | ವಾಹನ ಚಾಲಕರು | ಶ್ರೀ ದೇವರಾಜು | 19377 |
| 9. | ಸೇವಕ | ಖಾಲಿ ಹುದ್ದೆ | 0 |
| 10 | ತೋಟಗಾರಿಕೆ ಸಹಾಯಕರು | ಕೆಂಡಗಣ್ಣಪ್ಪ | 15422 |

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**4 B (XI) ಆಯವ್ಯಯ ವಿತರಣೆ 2016-17**

| ಕ್ರ.ಸಂ | ಯೋಜನೆ/ಯೋಜನೇತರ | ಭೌತಿಕ ಗುರಿ | ಆರ್ಥಿಕ ಗುರಿ ಲಕ್ಷಗಳಲ್ಲಿ |
|---|---|---|---|
| 1 | ತೋಟಗಾರಿಕೆ ಬೆಳೆಗಳ ವಿಶೇಷ ಹನಿ ನೀರಾವರಿ ಯೋಜನೆ (2435-00-101-0-28) (D-01) | 90.91 | 50.00 |
| 2 | ತೋಟಗಾರಿಕೆ ಕಟ್ಟಡಗಳು 2435-00-101-0-32 (D-02) | 4 | 5.00 |
| 3 | ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಯೋಜನೆ 2435-00-101-0-35 (D-03) | 5 | 5.00 |
| 4 | ತೆಂಗು ಬೀಜ ಸಂಗ್ರಹಣೆ ಮತ್ತು ನಿರ್ವಹಣೆ ಯೋಜನೆ 2435-00-101-0-36 (D-04) | 18027 | 3.00 |
| 5 | ಜೇನು ಕೃಷಿ ಯೋಜನೆ (D-07) | 98 | 6.00 |
| 6 | ರೈತರಿಗಾಗಿ ತರಬೇತಿ 2401-00-119-3-75 | 205 | 4.00 |
| 7 | ರೈತರಿಗೆ ಸಹಾಯ 2401-00-119-3-76 | 500 | 1.00 |
| 8 | ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ನಿಯಂತ್ರಣ ಯೋಜನೆ (2401-00-119-5-02) (S-17) | 379.16 | 8.05 |
| 9 | ಸಮಗ್ರ ತೋಟಗಾರಿಕೆ ಅಭಿವೃದ್ದಿ ಯೋಜನೆ | 2552.26 | 292.03 |
| 10 | ಮಧುವನ ಮತ್ತು ಜೇನು ಸಾಕಾಣಿಕೆ ಅಭಿವೃದ್ದಿ ಯೋಜನೆ (S-25) | 89 | 3.11 |
| 11 | ನಿರ್ದೇಶನ ಮತ್ತು ಆಡಳಿತ | 14 | 0.14 |
| 12 | ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ದಿ ಮತ್ತು ನಿರ್ವಹಣೆ | 1578 | 11.00 |
| 13 | ತೋಟಗಾರಿಕೆ ಮೂಲಭೂತ ಅಭಿವೃದ್ದಿ | 6 | 5.00 |
| 14 | ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ದಿ | 66.20 | 43.32 |
| 15 | ಕೃಷಿ ಭಾಗ್ಯ ಯೋಜನೆ (14-15 & 15-16) | | |
| 16 | ಭೂಸಮೃದ್ದಿ ಯೋಜನೆ | | |
| 17 | ಸೂಕ್ಷ್ಮ ಹನಿ ನೀರಾವರಿ ಯೋಜನೆ | 1639.1 | 1357.29 |
| 18 | ರಾಷ್ಟ್ರೀಯ ತೋಟಗಾರಿಕೆ ಮಿಷನ್ 2401-119-40-400031 (NHM) | 1740.7 | 713.12 |
| 19 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401-00-800-2-43 (RKVY) | 479 | 100.81 |
| 20 | ಯೋಜನೇತರ 2435–00–101–0–26 | | |

**4 B (XII) ಸಹಾಯಧನದೊಂದಿಗೆ ನಡೆಸುವ ಯೋಜನೆಗಳು ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮಂಜೂರು ಹಣ.**

ಅನುಮೋದಿತ ಕ್ರಿಯಾ ಯೋಜನೆ ಮತ್ತು ಮಾರ್ಗಸೂಚಿಗಳನ್ವಯ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಸಹಾಯಧನದ ಯೋಜನೆಗಳಿಗೆ ಸಂಬಂಧಿಸಿದಂತೆ ಫಲಾನುಭವಿವಾರು ವಿವರಗಳನ್ನು ಆಯಾ ತಾಲ್ಲೂಕು ಕಛೇರಿಗಳ ವಹಿಗಳಲ್ಲಿ ದಾಖಲಿಸಿ, ಯೋಜನೆವಾರು ಫಲಾನುಭವಿಗಳ ಪಟ್ಟಿಯನ್ನು ಮಾನ್ಯ ನಿರ್ದೇಶಕರಿಗೆ ಸಲ್ಲಿಸಲಾಗುತ್ತಿದೆ.

**4 B (XIII) ಇಲಾಖೆಯಿಂದ ಅಥರೈಜೇಷನ್ ಮಂಜೂರಾದ ಅಥವಾ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್ಸ್ ವಿವರಗಳು**

ಇಲಾಖೆಯಿಂದ ವಿವಿಧ ಯೋಜನೆ/ಕಾರ್ಯಕ್ರಮಗಳಡಿ ಮಂಜೂರಾದ ಮತ್ತು ರಿಯಾಯಿತಿ ದರದಲ್ಲಿ/ಸಂಪೂರ್ಣ ಉಚಿತವಾಗಿ ಸೌಲಭ್ಯಗಳನ್ನು ಪಡೆದಂತಹ ರೆಸಿಪಿಯೆಂಟ್ಸ್ (ಪಡೆದುಕೊಳ್ಳುವವರು) ಗಳ ವಿವರಗಳನ್ನು ಆಯಾ ಯೋಜನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಇಡಲಾದ ವಹಿಗಳಲ್ಲಿ ದಾಖಲಿಸಿಡಲಾಗಿರುತ್ತದೆ.

# ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ.

**4 B (XIV) ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿ ವಿವರ ದೊರಕುವಂತೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ**

1) 2014-15 ನೇ ಸಾಲಿನ ಮಾರ್ಚ್ ಮಾಹೆಯ ಪ್ರಗತಿ ವರದಿ.

2) 2015-16 ನೇ ಸಾಲಿನ ಮಾರ್ಚ್ ಮಾಹೆಯ ಪ್ರಗತಿ ವರಧಿ.

3) 2016-17 ನೇ ಸಾಲಿನ ಮಾರ್ಚ್ ಮಾಹೆಯ ಪ್ರಗತಿ ವರಧಿ.

**4 B (XV) ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶ ವಿಚಾರಗಳ ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದಾರೆ?**

ಈ ಕಛೇರಿಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವ ಮಾದರಿಯಲ್ಲಿ ಯಾವುದೇ ಗ್ರಂಥಾಲಯ ಅಥವಾ ಓದುವ ಕೊಠಡಿಗಳು ಇರುವುದಿಲ್ಲ. ಸಾರ್ವಜನಿಕರು ಕಛೇರಿ ಸಮಯದಲ್ಲಿ ಮಾಹಿತಿ ಕೋರ ಬಹುದಾಗಿದೆ.

**4 B (XVI) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು,ಪದನಾಮ ಮತ್ತು ಇತರೇ ವಿವರಗಳು**

**ಸಾರ್ವಜನಿಕ ಮಾಹಿತಿ ಅಧಿಕಾರಿ**

ಶ್ರೀ ಎಂ.ಅಂಜನ್ ಕುಮಾರ್,
ಕೇಂದ್ರ ಕಛೇರಿ ಸಹಾಯಕರು
ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
ದೂರವಾಣಿ ಸಂಖ್ಯೆ:9902592502

***ಮೇಲ್ಮನವಿ ಪ್ರಾಧಿಕಾರ***

**ಶ್ರೀ ರಘು.ಬಿ.,**
ತೋಟಗಾರಿಕೆ ಉಪ ನಿರ್ದೇಶಕರ
ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
ದೂರವಾಣಿ ಸಂಖ್ಯೆ: 9448999242

***4 B (XVII) ನಿಗಧಿಪಡಿಸಿದ ಇತರೇ ವಿಷಯಗಳು***

**ಯಾವುದು ಇಲ್ಲ**

ತೋಟಗಾರಿಕೆ ಉಪ ನಿರ್ದೇಶಕರು
(ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ.